ಶ್ರೀ ರಾಮಚಂದ್ರ ಮಿಷನ್®
India ECHOES
ONE WORLD ONE HUMANITY





## ಚೆನ್ನೈಯಲ್ಲಿ ಗುರುಗಳು

ಹೊಸ ವರ್ಷದ ಸಂಭ್ರಮಾಚರಣೆಗಳ ನಂತರ ಗುರುಗಳು ಗಾಯತ್ರಿಗೆ ಹೋಗಲು ಯೋಚಿಸಿದ್ದರು. ಆದರೆ ಅವರಿಗೆ ಸ್ವಾಸ್ಥ್ಯವಿಲ್ಲದ್ದರಿಂದ ಆಶ್ರಮದಲ್ಲೇ ಉಳಿದು ವಿಶ್ರಾಂತಿ ಪಡೆಯಲು ನಿರ್ಧರಿಸಿದರು.

ಭಾರತದ ವಿವಿಧೆಡೆಯಿಂದ ಹಾಗು ವಿದೇಶಗಳಿಂದ ಬಂದಿದ್ದ ಅಭ್ಯಾಸಿಗಳ ದೊಡ್ಡ ಗುಂಪೊಂದು ಆ ಸಂಜೆ ಗುರುಗಳ ಭೇಟಿಗಾಗಿ ಕಾಯುತ್ತಿತ್ತು. ಗುರುಗಳು ತಮ್ಮ ಕಛೇರಿಯಿಂದ ಹೊರಬಂದವರು "ನಿಮ್ಮೆಲ್ಲರಲ್ಲಿ ನನ್ನನ್ನು ಭೇಟಿ ಮಾಡುವ ಸಲುವಾಗಿ ಇಷ್ಟೊಂದು ದೀರ್ಘ ಸಮಯ ಕಾಯುವಷ್ಟು ಅಪಾರ ತಾಳ್ಮೆ ಇರುವುದು ಕಂಡು ನನಗೆ ಸಂತೋಷವಾಯಿತು" ಎಂದರು. ನಂತರ ಅಲ್ಲೇ ಮೊಗಸಾಲೆಯಲ್ಲಿ ಹತ್ತು ನಿಮಿಷಗಳಷ್ಟು ನಿಂತು ಅಲ್ಲಿದ್ದವರೊಡನೆ ಅಮೂಲ್ಯವಾದ ಸಮಯವನ್ನು ಕಳೆದರು. ಅಲ್ಲಿ ಜರ್ಮನಿ, ಫ್ರಾನ್ಸ್ ಇತ್ಯಾದಿ ದೇಶಗಳ ಅಭ್ಯಾಸಿಗಳಿದ್ದರು. ಗುರುಗಳು ತಮಾಷೆ ಮಾಡುತ್ತ "ಜರ್ಮನಿಯು ಯಾವುದಕ್ಕೋ ಪ್ರಸಿದ್ಧಿಯಾಗಿದೆ, ಫ್ರಾನ್ಸ್ ಬ್ರೆಡ್‌ಗಳಿಗೆ ಪ್ರಸಿದ್ಧಿ, ಇಟಲಿ ಕಾಫಿಗಾಗಿ ಪ್ರಸಿದ್ಧಿ ಮತ್ತು ಭಾರತ ಅಧ್ಯಾತ್ಮಿಕತೆಗೆ ಪ್ರಸಿದ್ಧಿಯಾಗಿದೆ" ಎಂದರು.

ಜನವರಿ 4ರಂದು ಗುರುಗಳು ಧ್ಯಾನಮಂದಿರದಲ್ಲಿ ಸತ್ಸಂಗ ನೆರವೇರಿಸಿದರು. ಮರುದಿನ ಭಾರ್ಗವ ಲಂಡನ್‌ಗೆ ಹೊರಡುತ್ತಿದ್ದುದರಿಂದ ಗುರುಗಳು ಬೆಳಗಿನ 4 ಗಂಟೆಗೆ ಎದ್ದು ಭಾರ್ಗವನನ್ನು ಬಿಳ್ಕೊಟ್ಟರು. ನಂತರ 5.30 ಕ್ಕೆ ಅವರು ಹೊರಗೆ ಕುಳಿತು ಕಾಫಿಯನ್ನು ಸೇವಿಸಿದರು.

ದಿನಾಂಕ 7 ರಂದು ಮಾಧ್ಯಮ ತಂಡದ ಕಾರ್ಯಾಗಾರಕ್ಕೆ ಹೋಗಿ ಆ ದಿನದ ಧ್ಯೇಯವಾಕ್ಯ 'ಸಹೋದರತ್ವ' ದ ಬಗ್ಗೆ ಮಾತನಾಡಿದರು. ಅವರು ಸಭಿಕರಲ್ಲಿ 'ನೀವೆಲ್ಲರೂ ನಿಜವಾದ ಅಭ್ಯಾಸಿಗಳೇ? ನೀವೇನಾದರೂ ನಿಜವಾದ ಅಭ್ಯಾಸಿಗಳಾಗಿದ್ದಲ್ಲಿ ಸಹೋದರತ್ವದ ಬಗ್ಗೆ ಕಾರ್ಯಗಾರವಿರಬೇಕಾದ್ದಿಲ್ಲ' ಎನ್ನುತ್ತ ತಮ್ಮ ಭಾಷಣ ಪ್ರಾರಂಭಿಸಿದರು. ಅವರು ಜಗಳಗಳು, ವಿರೋಧ, ಗುಂಪುಗಾರಿಕೆ ಮುಂತಾದವುಗಳ ಬಗ್ಗೆ ಹೇಳುತ್ತ ಇವೆಲ್ಲ ವ್ಯಕ್ತಿಯ ಅಹಂಕಾರ ಮತ್ತು ಇತರರೊಡನೆ ಸೇರಿ ಕೆಲಸ ಮಾಡಲು ಇರುವ ಅಸಾಮರ್ಥ್ಯದಿಂದ ಹುಟ್ಟುತ್ತಿವೆ ಎನ್ನುತ್ತ ಇದಕ್ಕಿಂತ ತಾವು ಅಭ್ಯಾಸಿಗಳನ್ನೂ ಒಳಗೊಂಡಂತೆ ಎಲ್ಲವನ್ನೂ ಹೊರಗೆಸೆದು ಬಾಬೂಜಿಯವರ ಕಾಲದಂತೆ ಮನೆಯಲ್ಲೇ ಕೆಲವೇ ಅಭ್ಯಾಸಿಗಳೊಂದಿಗೆ ನಿರ್ವಹಿಸಲು ಬಯಸುತ್ತೇನೆ ಎಂದರು. ನಂತರ ಅವರು "ನೀವೆಲ್ಲ ನಿಮ್ಮ ಅದ್ಭುತ ತಲೆಗಳಲ್ಲಿ ಸ್ವಲ್ಪ ಪ್ರಜ್ಞೆ ತುಂಬುತ್ತೀರೆಂದು ಆಶಿಸುತ್ತೇನೆ, ನಿಮ್ಮ ತಲೆಗಳು ಎಷ್ಟು ಬುದ್ಧಿವಂತವಾಗಿವೆ ಎಂದರೆ ಅವು ಇತರರ ಬುದ್ಧಿವಂತಿಕೆಯನ್ನು ಗುರುತಿಸಲಾರದಷ್ಟು" ಎಂದರು. ಸಹೋದರತ್ವದ ಬಗ್ಗೆ ಮಾತನಾಡುವುದಕ್ಕಿಂತ ಅಭ್ಯಾಸ ಮಾಡುವುದು ಉತ್ತಮ ಎಂದರು.

## ಭಾನುವಾರ 8 ಜನವರಿ 2012

ಸತ್ಸಂಗವನ್ನು ನೆರವೇರಿಸಿದ ನಂತರ ಗುರುಗಳು ತಮ್ಮ ಕಾಟೇಜ್‌ಗೆ ಹಿಂದಿರುಗಿದರು.ಕೆಲ ಸಮಯದ ನಂತರ ರಷ್ಯನ್ ಪಾಠಗಳಿಗಾಗಿ ತಮ್ಮ ಕಛೇರಿಯ ಕಡೆ ಹೋಗುತ್ತಿರುವಾಗ ಭೇಟಿಗಾಗಿ ಕಾದು ಸಾಲಾಗಿ ನಿಂತಿದ್ದ ಅಭ್ಯಾಸಿಗಳನ್ನು ಕಂಡವರೇ ಉಲ್ಲಾಸದಿಂದ ತಮಾಷೆಯಾಗಿ 'ಇಂದು ಬೆಳಗ್ಗೆ ಸತ್ಸಂಗದಲ್ಲಿ ಸಾಕಷ್ಟು ಪಡೆದಿದ್ದೀರಿ, ನನ್ನಿಂದ ಇನ್ನೂ ಹೆಚ್ಚಿನದನ್ನು ನಿರೀಕ್ಷಿಸಬೇಡಿ' ಎಂದರು.

ತಮ್ಮ ರಷ್ಯನ್ ಪಾಠಗಳ ನಂತರ ಅಭ್ಯಾಸಿಗಳ ಗುಂಪಿನೊಡನೆ ತಮ್ಮ ಕಛೇರಿಯಲ್ಲಿ ಕುಳಿತು ಮಾತನಾಡುತ್ತಿದ್ದರು. ಭಾಷೆಗಳ ಬಗ್ಗೆ ಅವರು "ಹೊಸ ಭಾಷೆಯನ್ನು ಕಲಿಯುವುದು ಪ್ರಾರಂಭದಲ್ಲಿ ಕಷ್ಟ ಅಷ್ಟೇ, ನೀವು ಹಲವಾರು ಭಾಷೆಗಳನ್ನು ಕಲಿಯಲು ತೊಡಗಿದರೆ ಇನ್ನೂ ಹೆಚ್ಚಿನ ಭಾಷೆಗಳನ್ನು ಕಲಿಯುವುದು ಸುಲಭವಾಗುತ್ತದೆ" ಎಂದರು. ಹಾಗೆಯೇ "ಸುಖಕ್ಕಾಗಿ ನೀವು ಅಂದುಕೊಂಡಿರುವುದಕ್ಕಿಂತ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ", "ನನಗೆ ತಿಳಿಯದ ಎಷ್ಟೋ ವಿಚಾರಗಳ ನಡುವೆಯೂ ನಾನು ಸಂತೋಷವಾಗಿದ್ದೇನೆ" ಎಂದರು.

## ಮಂಗಳವಾರ 10 ಜನವರಿ 2012

ಫ್ರಾನ್ಸ್ ಹಾಗು ವೆನೆಜುವೆಲಾದ 40 ಅಭ್ಯಾಸಿಗಳು ಹಜಾರದಲ್ಲಿ ಗುರುಗಳಿಗಾಗಿ ಕಾದಿದ್ದರು. ಗುರುಗಳು ಹೊರಬಂದು ಎಲ್ಲರಿಗೂ ಶುಭ ಹಾರೈಸಿ "ಇಲ್ಲಿ ಹೊಸ ಅಭ್ಯಾಸಿಗಳಿದ್ದಾರೆಯೇ" ಎಂದು ಪ್ರಶ್ನಿಸಿದಾಗ ಕೆಲವರು ತಮ್ಮ ಕೈ ಮೇಲೆ ಮಾಡಿದರು. ಒಬ್ಬ ಅಭ್ಯಾಸಿ "ಗುರುಗಳೇ ನಾನು 5 ವರ್ಷಗಳಿಂದ ಅಭ್ಯಾಸಿ, ನಾನು ಸಹ ಹೊಸ ಅಭ್ಯಾಸಿಯೇ?" ಎನ್ನಲು, ಗುರುಗಳು "ಇಲ್ಲ, ನೀನು ಒಳ್ಳೆಯ ಅಭ್ಯಾಸಿ" ಎಂದಾಗ ಎಲ್ಲರೂ ನಕ್ಕರು. ಗುರುಗಳು "ನಾನು ಐವತ್ತು ವರ್ಷಗಳಿಂದ ಅಭ್ಯಾಸಿ, ಆದರೂ ನನ್ನಲ್ಲಿ ಪ್ರಶ್ನೆಗಳಿವೆ. ಸಾಂಪ್ರದಾಯಿಕವಾದ ವೈಜ್ಞಾನಿಕ ಶಿಕ್ಷಣದಂತೆ ಕಲಿಯುವುದಲ್ಲ, ಆಧ್ಯಾತ್ಮವನ್ನು ಪಡೆಯಬೇಕಾಗುತ್ತದೆ. ಬಾಬೂಜಿಯವರು ಅಪಾರ ಜ್ಞಾನದ ಸಾಗರದಂತೆ, ಆದರೆ ನಲ್ಲಿ ತಿರುಗಿಸಿ ನೀರು ಪಡೆಯಲು ಯಾರೂ ಇಲ್ಲ" ಎಂದರು. ಒಮ್ಮೆ ಸಭೆಯೊಂದರಲ್ಲಿ ನೆರೆದಿದ್ದ ಅಭ್ಯಾಸಿಗಳಿಗೆ ನೀಡಲು ತಮ್ಮಲ್ಲಿ ಬೇಕಾದಷ್ಟಿದ್ದರೂ ಅದನ್ನು ಪಡೆಯಲು ಯಾರೂ



ಇಲ್ಲವೆಂದು ಬಾಬೂಜಿಯವರು ದುಃಖಿತರಾಗಿ, ಅಂದು ನೀಡಬೇಕೆಂದಿದ್ದನ್ನು ವಾತಾವರಣಕ್ಕೆ ಚೆಲ್ಲಿದರೆಂಬುದನ್ನು ಗುರುಗಳು ನೆನಪಿಸಿಕೊಂಡರು.

"ಕೃತಜ್ಞತೆ ಹಾಗು ಧನ್ಯವಾದದ ಮಧ್ಯೆ ಏನು ವ್ಯತ್ಯಾಸವಿದೆ?"ಎಂಬ ಪ್ರಶ್ನೆ ಕೇಳಲಾಗಿ ಗುರುಗಳು "ಹೌದು ,ಬಹಳ ದೊಡ್ಡ ವ್ಯತ್ಯಾಸವಿದೆ. ಕೃತಜ್ಞತೆ ಹೃದಯದಿಂದ ಬಂದರೆ ಧನ್ಯವಾದ ಮನಸಿನಿಂದ ಬರುತ್ತದೆ" ಎಂದರು.

## ಬುಧವಾರ ಜನವರಿ 11, 2012

ಗುರುಗಳು ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟ ನಂತರ ಹತ್ತು ವಿವಾಹಗಳನ್ನು ನೆರವೇರಿಸಿದರು. ಮಧ್ಯಾಹ್ನದಲ್ಲಿ ಸ್ಕೈಪ್ ಮೂಲಕ ಜಮ್ಮುವಿನ ಆಶ್ರಮದ ನೇರ ಪ್ರಸಾರವನ್ನು ನೋಡಿದರು. ಪ್ರಸಾರದ ನಂತರ ಗುರುಗಳು ತಾವೇ ಸ್ವತಃ ಅಲ್ಲಿನ ಸ್ಥಳ ವೀಕ್ಷಣೆಗೆ ಹೋಗಿದ್ದ ಅನುಭವವಾಯಿತೆಂದೂ ಅಭ್ಯಾಸಿಗಳು ಅದನ್ನು ಉದ್ಘಾಟಿತವೆಂದು ಇನ್ನು ಮುಂದೆ ಧ್ಯಾನಮಂದಿರವನ್ನು ಬಳಸಬಹುದೆಂದು ಹೇಳಿದರು.

ಜನವರಿ 12ರಂದು ಗುರುಗಳು ಗಾಯತ್ರಿಗೆ ತೆರಳಿ 14ರ ಬೆಳಗಿನ 9 ಗಂಟೆಗೆ ಹಿಂದಿರುಗಿದರು.

## ಭಾನುವಾರ 15 ಜನವರಿ 2012

ಒಮೆಗಾ ಶಾಲೆಯ 12 ನೆ ತರಗತಿಯ ಎಲ್ಲಾ ಮಕ್ಕಳನ್ನು ಗುರುಗಳು ಉಪಹಾರಕ್ಕಾಗಿ ಕರೆದಿದ್ದರು. ಉಪಹಾರದ ನಂತರ ಗುರುಗಳು ಬಿಸಿಲಿನಲ್ಲಿ ಕುಳಿತು, ಮಕ್ಕಳು ಮಾತ್ರ ತಮ್ಮ ಮುಂದೆ ಕೂರಬೇಕೆಂದು ಹೇಳಿ ಅವರೊಡನೆ ಬಹಳ ಹೊತ್ತು ಮಾತನಾಡಿದರು. ಅವರು "ಯಶಸ್ಸಿಗಾಗಿಯೇ ಎದುರು ನೋಡುತ್ತಿರಬಾರದು ಆದರೆ ಅನುತ್ತೀರ್ಣರಾಗಬಾರದು" ಎಂದರು. ಶಾಲೆಯಲ್ಲಿ ಶಿಕ್ಷಣ, ಮನೆಯಲ್ಲಿ ಸದಾಚಾರ ಮತ್ತು ನೈತಿಕತೆ, ಎರಡೂ ಶಾಲೆಯಲ್ಲೂ ಕಲಿಸಲಾಗುವುದು.ಇವು ನದಿಯ ಎರಡು ದಡಗಳಂತೆ. ಎರಡು ದಡಗಳಿಲ್ಲದ ನದಿಗಳಿಲ್ಲ. ನದಿಯು ಮಧ್ಯದಲ್ಲಿ ರಭಸವಾಗಿ ಹರಿಯುತ್ತದೆ. ಮಧ್ಯದಲ್ಲಿರುವಾಗ ನಾವಿದನ್ನು ಅರಿತುಕೊಂಡು ಎರಡೂ ದಡಗಳನ್ನು ಕಾಯ್ದುಕೊಂಡು, ರಭಸವಾಗಿ ಹರಿಯಬೇಕು" ಎಂದರು.



ಜನವರಿ 17 ರಿಂದ 22ರವರೆಗೆ ಗುರುಗಳು ರಷ್ಯಾದ ಮತ್ತು ರಷ್ಯನ್ ಮಾತನಾಡುವ ಹಳೆಯ ಸಿಐಎಸ್ ದೇಶಗಳ ಅಭ್ಯಾಸಿಗಳ ಕಾರ್ಯಾಗಾರದಲ್ಲಿ ನಿರತರಾಗಿದ್ದರು. ಪ್ರತಿದಿನ ಅವರುಗಳೊಡನೆ ಮಾತನಾಡುತ್ತ ಬೈಠಕ್‌ಗಳನ್ನು ನೀಡುತ್ತ ತಮ್ಮನ್ನು ತೊಡಗಿಸಿಕೊಂಡಿದ್ದರು. ಅಭ್ಯಾಸಿಗಳ ಸಂಖ್ಯೆ 500 ತಲುಪಿದ್ದು ಅವರಿಗೆ ಅತೀವ ಸಂತಸವಾಗಿತ್ತು. ಎಲ್ಲರಿಗೂ ಕುಟೀರದಲ್ಲಿ ರಾತ್ರಿಯ ಭೋಜನ ಏರ್ಪಡಿಸಿ ಸತ್ಕರಿಸಿದರು.ಅವರಲ್ಲಿ ಕೆಲವರನ್ನ ಪ್ರಶಿಕ್ಷಕರನ್ನಾಗಿಸಿದರು. ಸೋ.ಚಕ್ರಪಾಣಿ, ಕಮಲೇಶ್ ಪಟೇಲ್ ಮತ್ತು ಪಿ.ಆರ್. ಕೃಷ್ಣ ಈ ಕಾರ್ಯಾಗಾರದಲ್ಲಿ ಮಾತನಾಡುವುದನ್ನು ಸಿಸಿಟಿವಿ ಮೂಲಕ ವೀಕ್ಷಿಸಿದರು.

ಜನವರಿ 17 ಮತ್ತು 19, 2012ರಂದು ಗುರುಗಳು ಭಾಗಿಗಳಿಗಾಗಿ ಮಾತನಾಡಿದರು. ತಮ್ಮ ಭಾಷಣದಲ್ಲಿ ಅವರು ಹೇಳಿದರು :

### ಚಾರಿತ್ರ್ಯದ ಬಗ್ಗೆ:

ಅಧ್ಯಾತ್ಮಿಕ ಜೀವನದ ಏಕೈಕ ಪ್ರಮುಖ ಅಂಶವಾಗಿದೆ. ಇಚ್ಛೆಗಳು ಹೊರಗೆಲ್ಲೋ ಇರುವ ಬಾಹ್ಯ ವಸ್ತುಗಳಲ್ಲದೆ ಅವು ನಮ್ಮೊಳಗೇ ಇರುವಂತಹದ್ದಾಗಿದೆ. ಇಚ್ಛೆಗಳು ಒಳಗೆ ಅವಿತಿದ್ದು ಹೊರಗಿನಿಂದ ಸರಿಯಾದ ಪ್ರಚೋದನೆ ದೊರೆತ ಕೂಡಲೆ ಪ್ರಕಟವಾಗಿ ಬಿಡುತ್ತವೆ. ಈ ಪ್ರಲೋಭನೆಗಳು ಮತ್ತು ಇಚ್ಛೆಗಳನ್ನೆಲ್ಲಾ ನಮ್ಮೊಳಗಿನಿಂದ ತೆಗೆಯುವ ಸರಿಯಾದ ರೀತಿಯು ಸಹಜಮಾರ್ಗದಲ್ಲಿರುವ ವಿಶೇಷವಾದ ಅಂಶವಾಗಿದೆ.

### ಅಗತ್ಯ ಮತ್ತು ಬಯಕೆ:

ನಾವು ನಮ್ಮ ಜೀವನದಲ್ಲಿ ಬಯಕೆ ಮತ್ತು ಅಗತ್ಯಗಳ ನಡುವಿನ ವ್ಯತ್ಯಾಸವನ್ನರಿತು ಬದುಕುವ ವಿಧಾನವನ್ನು ಕಲಿಯಬೇಕು. ಅಗತ್ಯವಾದುವುಗಳೆಲ್ಲ ಅವಶ್ಯವೇ, ಆಹಾರ, ಮನೆ, ಉಡುಪು ಇವುಗಳು, ಇವು ದೊರೆಯುತ್ತವೆ. ಆದರೆ ಬಯಕೆಗಳು ಪೂರೈಕೆಯಾಗಲಾರವು. ಬಾಬೂಜಿಯವರು ಹೇಳಿರುವಂತೆ "ಸರಳರಾಗಿರಿ ಹಾಗು ಜೀವನ ನಿಸರ್ಗದೊಡನೆ ಸಮರಸವಾಗಿರಲಿ" ಎಂದರು.





## ತಿರುಚ್ಚಿಯಲ್ಲಿ ಗುರುಗಳು

23 ಜನವರಿ ಸೋಮವಾರ ಗುರುಗಳು ವಿಮಾನದ ಮೂಲಕ ತಿರುಚ್ಚಿಗೆ ತೆರಳಿದರು. ಅದೊಂದು ಖಾಸಗಿ ಭೇಟಿ ಆಗಿರಬೇಕಿತ್ತು. ಆದರೆ ಆಗಲೇ ಬಹಳಷ್ಟು ಅಭ್ಯಾಸಿಗಳು ಅವರಿಗಾಗಿ ಕಾದಿದ್ದು ,ಯಾರೋ ಒಬ್ಬರು ಗುರುಗಳಿಗೆ "ನೀವು ಅವರುಗಳು ಬರಲು ಅನುಮತಿಸಿದ್ದೀರಿ" ಎನ್ನಲು ಗುರುಗಳು, "ಇದು ಲಾರ್ಡ್ ಆಫ್ ದ ರಿಂಗ್ಸ್ ಸಿನೆಮಾದಲ್ಲಿ ಫ್ರಾಡೊ ಗಾನ್ಡಾಲ್ಫ್‌ಗೆ 'ಅರ್ಧ ಊರಿನ ಜನರಿಗೆ ಬರ ಹೇಳಿದೆ ಮತ್ತೆ ಅರ್ಧ ಜನ ಹೇಗೂ ಬರುತ್ತಾರೆ ಎಂದಂತಾಯಿತು" ಎನ್ನಲು ಎಲ್ಲರು ನಕ್ಕರು.

ಸುಮಾರು 142 ವಿದೇಶಿ ಅಭ್ಯಾಸಿಗಳು ಗುರುಗಳೊಡನೆ ಪ್ರಯಾಣಿಸಿದ್ದರು. ಸುಮಾರು 60 ರಷ್ಯನ್ ಅಭ್ಯಾಸಿಗಳು ರಸ್ತೆ ಪ್ರಯಾಣದ ಮೂಲಕ ತಲುಪಿದರು. 24ರಂದು ಗುರುಗಳು ವಿಶ್ರಾಂತಿ ತೆಗೆದುಕೊಂಡು ಬೆಳಗಿನ ಬಿಸಿಲಿನಲ್ಲಿ ಕುಳಿತು ನಿಸರ್ಗವನ್ನು ಸವಿಯುತ್ತ, ಪಕ್ಷಿಗಳ ಕಲರವ, ಬೆಲ್ಲದ ಸುವಾಸನೆ ಆಸ್ವಾದಿಸುತ್ತಿದ್ದರು. ಸೂಕ್ಷ್ಮವಾದ ವಾತಾವರಣವಿದ್ದು ಅಲ್ಲಿದ್ದ ಎಲ್ಲರೂ ವಿಶೇಷ ಕೃಪೆಯನ್ನು ಅನುಭವಿಸಿದರು. ಮಾತನಾಡುತ್ತಾ ಅವರು "ಎಲ್ಲರೂ ನಾವು ಹಣವನ್ನು ಕೊಡುವುದಿಲ್ಲ ಅಥವಾ ಪಡೆಯುವುದಿಲ್ಲವೆಂಬ ಪ್ರತಿಜ್ಞೆ ಮಾಡಿದರೆ ಭ್ರಷ್ಟಾಚಾರಕ್ಕೆ ಆಸ್ಪದವೇ ಇರುವುದಿಲ್ಲ" ಎಂದರು.



25ರ ಬೆಳಗ್ಗೆ ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು. ನಂತರ ಅನೌಪಚಾರಿಕವಾಗಿ ಮಾತನಾಡುತ್ತ "ಮಕ್ಕಳ ಬಗ್ಗೆ ಕಾಳಜಿ ತೆಗೆದುಕೊಳ್ಳಬೇಕು. ಯಾವುದೇ ಸಮಾಜ ಮಹಿಳೆಯರು ಮತ್ತು ಮಕ್ಕಳ ಬಗ್ಗೆ ಕಾಳಜಿ ತೆಗೆದುಕೊಳ್ಳದಿದ್ದರೆ ಅದು ಏಳಿಗೆಯಾಗುವುದಿಲ್ಲ" ಎಂದರು.

26ರಂದು ಗುರುಗಳು ಎಲ್ಲಾ ಅಭ್ಯಾಸಿಗಳಿಗೂ ಜಾನಕಿ ಫಾರಂನಲ್ಲಿ ರಾತ್ರಿಯ ಭೋಜನವನ್ನು ಅತ್ಯಂತ ಪ್ರೀತಿಯಿಂದ ಏರ್ಪಡಿಸಿದ್ದರು. 27ರ ಬೆಳಗಿನ ಬಿಸಿಲಿನಲ್ಲಿ ಕುಳಿತಿದ್ದಾಗ ಅವರು ಈ ಕೆಲ ಅಂಶಗಳನ್ನು ಹೇಳಿದರು:

❖ ಬಾಬೂಜಿಯವರ ಎಡಗಣ್ಣು ಸದಾ ಕೆಳಮುಖವಾಗಿರುತ್ತಿತ್ತು.ನಾನೊಮ್ಮೆ ಅವರನ್ನು ಕಣ್ಣು ಪರೀಕ್ಷೆ ಮಾಡಿಸಿಕೊಳ್ಳಿರೆಂದು ವಿನಂತಿಸಿಕೊಂಡೆ, ಅದಕ್ಕವರು ತಾನು ಆ ಕಣ್ಣನ್ನು ಸದಾ ತಮ್ಮ ಹೃದಯದೆಡೆಗೆ ಕೇಂದ್ರೀಕರಿಸಿದ್ದು, ಮತ್ತೊಂದು ಕಣ್ಣು ಮಾತ್ರ ಬಹಿರ್ಮುಖಿಯಾಗಿರುತ್ತದೆ ಎಂದರು.

❖ ನೋವು ನಮ್ಮನ್ನು ಎಚ್ಚರಿಸುತ್ತದೆ, ನಲಿವಲ್ಲ.

❖ ಹಿಂದಿನ ಕಾಲದಲ್ಲಿ ವಾಲ್ವ್ ಇರುವ ರೇಡಿಯೋಗಳಿದ್ದು ನೀವು ಬಿಬಿಸಿ ಕೇಳಬೇಕೆಂದಿದ್ದರೆ ಬಹಳಷ್ಟು ಶ್ರಮವಹಿಸಿ ಶೃತಿಗೊಳಿಸಬೇಕಿತ್ತು. ನೀವು ನಿಮ್ಮ ಹೃದಯವನ್ನು ಇದೇ ಮಾದರಿಯಲ್ಲಿ ಶೃತಿಗೊಳಿಸಬೇಕು.

ಸೋ.ಗಣೇಶ್ ಮತ್ತು ಸೋ.ಕುಮರೇಶ್‌ರಿಂದ ವಯೊಲಿನ್ ವಾದನ ಕಾರ್ಯಕ್ರಮವು ಜನವರಿ 28ರಂದು ಜಾನಕಿ ಫಾರ್ಮ್‌ನಲ್ಲಿ ಏರ್ಪಟ್ಟಿದ್ದು ಗುರುಗಳು ಬಹಳ ಆನಂದಿಸಿದ್ದರು. ಹಾಗೆಯೇ ತೋಟದಲ್ಲಿ ಜನಿಸಿದ್ದ ಎರಡು ಕರುಗಳಿಗೆ ಪದ್ಮ ಮತ್ತು ಮರುಧಮ್ ಎಂದು ಗುರುಗಳು ನಾಮಕರಣ ಮಾಡಿದರು. ಜನವರಿ 29ರಂದು ಎರಡು ವಿವಾಹ ಸಂಪನ್ನಗೊಳಿಸಿದರು. 30ರಂದು ಗುರುಗಳು ತಂಜಾವೂರಿಗೆ ಹೋಗಬೇಕಿದ್ದು ಅವರಿಗೆ ಸ್ವಾಸ್ಥ್ಯವಿರದ ಕಾರಣ ಸೋ. ಕಮಲೇಶ್ ವಿದೇಶಿ ಅಭ್ಯಾಸಿಗಳೊಡನೆ ಅಲ್ಲಿಗೆ ತೆರಳಿದರು. ಗುರುಗಳು ಎರಡು ಸತ್ಸಂಗಗಳನ್ನು ನೆರವೇರಿಸಿ ಆಶ್ರಮದ ಆವರಣದಲ್ಲಿ ಹಾಗೆಯೇ ವಸತಿ ಬಡಾವಣೆಯಲ್ಲಿ ಸುತ್ತಾಡಿದರು.

## 2012 ಫೆಬ್ರವರಿ 2 ಗುರುವಾರ

ಸುಮಾರು ಎರಡು ಸಾವಿರ ಅಭ್ಯಾಸಿಗಳು ಪೂಜ್ಯ ಲಾಲಾಜಿ ಮಹಾರಾಜರ ಜನ್ಮ ದಿನೋತ್ಸವದಂದು ತಿರುಚ್ಚಿ ಆಶ್ರಮದಲ್ಲಿ ನೆರೆದಿದ್ದರು. ಗುರುಗಳು 6ರಂದು ಚೆನ್ನೈಗೆ ಹೊರಟರು.

## ಮತ್ತೆ ಚೆನ್ನೈಯಲ್ಲಿ

ಗುರುಗಳು ಫೆಬ್ರವರಿ 6 ರಂದು ಚೆನ್ನೈಗೆ ಹಿಂದಿರುಗಿದರು. ಅಭ್ಯಾಸಿಗಳೊಡನೆ ಮಾತನಾಡುತ್ತ, ವಿಧಿ ಹೇಗೆ ನಮ್ಮ ಜೀವನದಲ್ಲಿ ತನ್ನ ಪಾತ್ರ ಆಡುತ್ತದೆ ಎಂಬುದನ್ನು ಉಮರ್ ಖಯ್ಯಾಮ್‌ನ ಸಾಲುಗಳಲ್ಲಿ ಹೇಳಿದರು.



"ಇದು ಹಗಲು ರಾತ್ರಿಗಳ ಚದುರಂಗ, ವಿಧಿಗೆ ಮಾನವ ಆಟದ ತುಣುಕು: ಅತ್ತಲೋ ಇತ್ತಲೋ ಎತ್ತ ತಿರುಗಿಸಿದರೂ; ಸೋಲು ಇಲ್ಲ ಸಾವು, ಒಬ್ಬೊಬ್ಬರೇ ಹಿಂದಿರುಗಿ ಕೋಣೆ ಸೇರುವರು ನೋಡು."


ನಮಗೆ ನಮ್ಮದೇ ಆದ ಯೋಜನೆಗಳಿದ್ದರೂ ವಿಧಿ ಹೇಗೆ ತನಗೆ ಬೇಕಾದನ್ನು ನಡೆಸುತ್ತದೆ ಎಂಬುದಕ್ಕೆ ಉದಾಹರಣೆಯಾಗಿ ಅವರು ಇದನ್ನು ಹೇಳಿದರು.

ಆಳವಾದ ಧ್ಯಾನದ ನಂತರ ಎದ್ದು ಕೆಲಸಕ್ಕೆ ಹಿಂದಿರುಗುವುದು ಕಷ್ಟ ಎನಿಸಿದಾಗ ಬಾಬೂಜಿಯರು "ಚಟುವಟಿಕೆ ದೇಹದ ಜೀವನ, ತಟಸ್ಥತೆ ಆತ್ಮದ ಜೀವನ" ಎಂದಿದ್ದರು ಎಂಬುದನ್ನು ಉದಾಹರಿಸಿದರು. ಆತ್ಮ ಜಾಗೃತಿ ಹೆಚ್ಚಾದಷ್ಟು ಆತ್ಮದ ಜೀವನ ಮನುಷ್ಯನಲ್ಲಿ ವ್ಯಾಪಿಸುತ್ತದೆ, ಆಗ ಸುಮ್ಮನಿರಬೇಕನಿಸುತ್ತಿರುತ್ತದೆ. ಇದನ್ನು ಅವರು 'ಸಹಜ ಸಮಾಧಿ'ಯ ಸ್ಥಿತಿಗೆ ಸಮೀಕರಿಸಿದರು. ಇಲ್ಲಿ ಒಬ್ಬ ಜಾಗೃತನಾಗಿದ್ದರೂ ಸಂಪೂರ್ಣ ಮುಳುಗಿರುವವನಂತೆ ತಟಸ್ಥ ಸ್ಥಿತಿಯಲ್ಲಿರುತ್ತಾನೆ. ನಂತರ ಗುರುಗಳು "ನಾನೀಗ ಮಲಗಲು ಬಯಸುತ್ತೇನೆ, ಆದರೂ ನನ್ನ ಇಚ್ಛಾಶಕ್ತಿಯನ್ನು ಬಳಸಿ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತೇನೆ" ಎಂದರು.



## ಬುಧವಾರ 8 ಫೆಬ್ರವರಿ 2012

ಗುರುಗಳು ತಮಾಷೆ ಮಾಡುತ್ತ 'ದೇವತೆಗಳು ಮತ್ತು ರಾಕ್ಷಸರು' ಪುಸ್ತಕದ ಹೆಸರನ್ನು ಉದಾಹರಿಸುತ್ತ ಹೇಗೆ ಈ ಸೃಷ್ಟಿಯಲ್ಲಿ ಎರಡೂ ಅವಶ್ಯವಾದವು ಎಂದರು. ನಂತರ ಅವರು ಭಗವಾನ್ ಶಿವನ ಬಗ್ಗೆ ಮಾತನಾಡುತ್ತ ಆತ ಕೈಲಾಸ ಪರ್ವತದಲ್ಲಿ ಹಿಮದ ಮೇಲೆ ಕುಳಿತಿರುವಾಗ ಆತನ ಶ್ರೋತೃಗಳಾಗಿ ಋಷಿಗಳು, ಮುನಿಗಳು, ದೇವತೆಗಳು, ಅಸುರರು ಮತ್ತು ರಾಕ್ಷಸರೂ ಕೂಡ ಇರುತ್ತಿದ್ದರು. ಸೃಷ್ಟಿಯ ಸಮಸ್ತರೂ ಶಿವನ ನೃತ್ಯ ನೋಡಲು ಉಪಸ್ಥಿತರಿರುತ್ತಿದ್ದರು. ವಿಷ್ಣುವಿನ ಬಗ್ಗೆ ಕೇಳಲಾಗಿ ಗುರುಗಳು, ವಿಷ್ಣು ಕರುಣೆ ಮತ್ತು ಪ್ರೇಮದ ಸಂಕೇತವಾಗಿದ್ದು ಆತನಿಗೆ ಈ ಬಗೆಯ ಶ್ರೋತೃಗಳಿರಲಿಲ್ಲ ಎಂದರು. ಗುರುಗಳು ಒಂದು ವಾರದ ಮಟ್ಟಿಗೆ ಗಾಯತ್ರಿಯಲ್ಲಿದ್ದು 18 ಫೆಬ್ರವರಿಯಂದು ಮಣಪ್ಪಾಕ್ಕಂಗೆ ಹಿಂದಿರುಗಿದರು.




ಈ ಪ್ರಕಾರ ಯಾವುದು ನಮ್ಮ ಮನಸ್ಸನ್ನು ಶಿಕ್ಷಿತ ಹಾಗು ನಿಯಂತ್ರಿತಗೊಳಿಸುವುದೋ, ನಮ್ಮ ಇಂದ್ರಿಯಗಳಲ್ಲಿಯೂ ಅವುಗಳ ಸಾಮರ್ಥ್ಯಗಳಲ್ಲಿಯೂ ಮಿತತ್ವವನ್ನು ನೆಲೆಗೊಳಿಸಿ ಆತ್ಮಿಕ ಲಘುತ್ವವನ್ನುಂಟುಮಾಡುವುದೋ, ಅದೇ ನಿಜವಾದ ಆಧ್ಯಾತ್ಮಿಕ ತರಬೇತಿ. ಆಗ ಮಾತ್ರ ಆಂತರಿಕ ಶಾಂತಿ–ಸಮಾಧಾನಗಳು ಸುರಕ್ಷಿತವಾಗಿ ಉಚ್ಚತರ ಸಿದ್ಧಿಯು ಶಕ್ಯವಾಗುವುದು.


–ಬಾಬೂಜಿ ಮಹಾರಾಜ್

ಸತ್ಯೋದಯ ಪುಟ 62


# ಹೊಸ ಪ್ರಕಟಣೆಗಳು





ಹಾರ್ಟ್ ಸ್ಪೀಕ್ 2006
ಮಲಯಾಳಂ





ಹಾರ್ಟ್ ಸ್ಪೀಕ್ 2009
ಇಂಗ್ಲೀಷ್




ಟ್ರೂತ್ ಎಟರ್ನಲ್
ತೆಲುಗು





ವ್ಹಾಟ್ ಇಸ್ ಸಹಜಮಾರ್ಗ್
ಇಂಗ್ಲೀಷ್




**ಎಟರ್ನಲ್ ಮೆಮೊರಿಸ್ ಸಂ–1**

ಇದು ವಿದೇಶಿ ಅಭ್ಯಾಸಿಗಳು ತೆಗೆದ ಬಾಬೂಜಿ ಮಹಾರಾಜರ ಅಮೂಲ್ಯವಾದ ವಿಡಿಯೋತುಣುಕುಗಳಿವೆ. ಇದು ವಿಶಾಲ ವ್ಯಾಪ್ತಿಯಲ್ಲಿ ಬಹಳಷ್ಟು ವಿವಿಧ ಸಂಗತಿಗಳನ್ನೊಳಗೊಂಡಿದ್ದು, ಶಹಜಹಾನಪುರದ ಜೀವನ, ಬಸಂತ ಉತ್ಸವ, 1982 ರ ದೆಹಲಿಯಲ್ಲಿ ನಡೆದ ಪೂಜ್ಯ ಬಾಬೂಜಿಯವರ ಹುಟ್ಟು ಹಬ್ಬದ ದೃಶ್ಯಗಳು ಮತ್ತು ಅವರ ಯೂರೋಪ್ ಪ್ರವಾಸ ಇತ್ಯಾದಿಗಳನ್ನೆಲ್ಲ ಒಳಗೊಂಡಿದೆ.





**ಹಾರ್ಟ್ ಸ್ಪೀಕ್ 2009**

ಇದು 2009ರ ಪೂಜ್ಯ ಗುರುಗಳು ನೀಡಿದ ಎಲ್ಲಾ ಭಾಷಣಗಳ ಎಮ್.ಪಿ.3 ಆಡಿಯೋ ಸಿ.ಡಿಯಾಗಿದೆ. ಇದರಲ್ಲಿ ಒಟ್ಟು 34 ಭಾಷಣಗಳಿವೆ.




**ನಾಮಿನೇಷನ್ ಆಫ್ ದಿ ಸಕ್ಸಸರ್**

ಇದು ಗುರುಗಳು ಕಮಲೇಶ್ ಪಟೇಲರನ್ನು ತಮ್ಮ ಉತ್ತರಾಧಿಕಾರಿಯೆಂದು ಘೋಷಿಸಿ ಅಕ್ಟೋಬರ್ 3 2011ರಂದು ಕೊಲ್ಕತ್ತದಲ್ಲಿ ಮತ್ತು ಮುಂಬೈ, ಅಹಮದಾಬಾದ್ ಮತ್ತು ಚೆನ್ನೈಗಳಲ್ಲಿ ಅವರನ್ನು ಅಭ್ಯಾಸಿಗಳಿಗೆ ಪರಿಚಯಿಸುವ ಸಲುವಾಗಿ ಮಾಡಿದ ಕಿರುಭಾಷಣಗಳನ್ನು ಒಳಗೊಂಡಿದೆ. ಕೊನೆಯಲ್ಲಿ ಸೋ.ಕಮಲೇಶ್‌ರವರು ಗುರುಗಳೊಂದಿಗೆ ಹಾಗೂ ಬಾಬೂಜಿಯವರೊಂದಿಗಿರುವ ಛಾಯಾಚಿತ್ರಗಳ ನೋಟವಿದೆ.




**ಇನ್ಸಾನ್ ಬನೊ**

ಇದು 2011ರ 9 ಅಕ್ಟೋಬರರಂದು ಗುವಹಾತಿಯಲ್ಲಿ ಗುರುಗಳು ನೀಡಿದ ಇನ್ಸಾನ್ ಬನೊ ಭಾಷಣದ ಡಿವಿಡಿಯಾಗಿದೆ. ಇದರಲ್ಲಿ ಗುರಗಾಂವ್ ಆಶ್ರಮದಲ್ಲಿ ಅನೌಪಚಾರಿಕವಾಗಿ ಗುರುಗಳು ಮಾತನಾಡಿರುವ ಸ್ಫೂರ್ತಿದಾಯಕ ಸಂಭಾಷಣೆಗಳಿವೆ. ಇವು ಹಿಂದಿ ಭಾಷೆಯಲ್ಲಿದ್ದು ಇದರಲ್ಲಿ ಗುರುಗಳು ನೆರೆದಿರುವ ಅಭ್ಯಾಸಿಗಳಿಗೆ ಸೋ.ಕಮಲೇಶ್‌ರನ್ನು ತಮ್ಮ ಉತ್ತರಾಧಿಕಾರಿಯೆಂದು ಪರಿಚಯಿಸುತ್ತಾರೆ.

# 140ನೇ ಜನ್ಮ ದಿನೋತ್ಸವ

## ಪೂಜ್ಯ ಲಾಲಾಜಿ ಮಹಾರಾಜರು



"ಆದ್ದರಿಂದ, ಓ ಸತ್ಯಾನ್ವೇಷಿಗಳೇ, ನೀವು ನಿಜವಾಗ್ಯೂ ಆನಂದದ ಹುಡುಕಾಟದಲ್ಲಿದ್ದರೆ, ಆತ್ಮಾರಾಮರಾಗಲು ಪ್ರಯತ್ನಿಸಿ, ಆನಂದವನ್ನು ನಿಮ್ಮ ಆತ್ಮದಲ್ಲೇ ಅನ್ವೇಷಿಸಿ; ಆತ್ಮಜ್ಞಾನದ ಹಂತಗಳನ್ನು ಅರಿಯಿರಿ; ಸತ್ಯಾನ್ವೇಷಿಯಾಗಿ ಆಗ ನೀವು ಚಿರಂತನ ಆನಂದವನ್ನು ಹೊಂದುವಿರಿ."

– ಪೂಜ್ಯ ಲಾಲಾಜಿ ಮಹಾರಾಜರು
ಸಂಪೂರ್ಣ ಕೃತಿಗಳು – ಪುಟ ೨೯೩( ಆಂಗ್ಲ ಭಾಷೆಯ ಮುದ್ರಣ)



ಬೆಂಗಳೂರು

### ಕರ್ನಾಟಕ

**ಬೆಂಗಳೂರಿನ** ಪರಂಧಾಮ ಆಶ್ರಮದಲ್ಲಿ ಸುಮಾರು 1200 ಅಭ್ಯಾಸಿಗಳು ಬಹಳ ಆಸಕ್ತಿಯಿಂದ ಅಂದಿನ ಪೂರ್ಣ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮೊದಲ ಅವಧಿಯಲ್ಲಿ ಭಾಷಣಗಳು ನಂತರ ಉಕ್ತಿಗಳ ರಸಪ್ರಶ್ನೆ ಕಾರ್ಯಕ್ರಮವಿತ್ತು. ಅಭ್ಯಾಸಿಗಳು ಉಕ್ತಿಗಳ ಮೇಲೆ ತಮ್ಮ ಅಂತಃವೀಕ್ಷಣೆ ನಡೆಸಿ ತಮಗೆ ಆದ ಅರಿವನ್ನು ಕುರಿತು ಹೇಳಬೇಕಾಗಿದ್ದಿತು. ಅಂದಿನ ಕಾರ್ಯಕ್ರಮದ ಸಾಮಾನ್ಯ ವಿಚಾರವು ಅಭ್ಯಾಸಿಗಳು ತಮ್ಮ ಪರಿವರ್ತನೆಗಾಗಿ ತಮ್ಮದೇ ಅಂತರ್ವಿಶ್ಲೇಷಣೆ ನಡೆಸುವುದಾಗಿತ್ತು.

**ಹುಬ್ಬಳ್ಳಿ** ಕೇಂದ್ರದಲ್ಲಿ, ಬೇಲೂರ್, ಧಾರವಾಡ, ಗದಗ, ನವಲಗುಂದ, ನವನಾಗನೂರ್, ಪುದಕಲ್ಕಟ್ಟಿ ಮತ್ತು ಶಿರಸಿಗಳಿಂದ ಬಂದಿದ್ದ ದಾಖಲೆ ಸಂಖ್ಯೆಯಾದ 225 ಜನ ಅಭ್ಯಾಸಿಗಳು ಭಾಗವಹಿಸಿದ್ದರು. ಅವರು ಹುಕ್ಕಾ ಮತ್ತು ನಾನು ಡಿವಿಡಿ ಯಿಂದ ಒಂದು ಭಾಗವನ್ನು ಪ್ರದರ್ಶಿಸಲಾಯಿತು. ನಂತರ ಅಭ್ಯಾಸಿಗಳು ರಾಮಚಂದ್ರರ ಸಮಗ್ರ ಕೃತಿಗಳು (ಲಾಲಾಜಿ) ಪುಸ್ತಕದ ಕೆಲ ವಿಷಯಗಳ ಬಗ್ಗೆ ಮಾತನಾಡಿದರು. ಭಜನೆಗಳು, ಪ್ರಶ್ನೋತ್ತರ ಕಾರ್ಯಕ್ರಮ, ಮತ್ತು ಯುವಕರಿಂದ 'ದ್ರೌಪದಿ ಗರ್ವಭಂಗ'ಕಿರುನಾಟಕಗಳ ನಂತರ ಸತ್ಸಂಗದೊಂದಿಗೆ ಮುಕ್ತಾಯವಾಯಿತು. ವಾತಾವರಣವು ಹೇಗಿತ್ತೆಂದರೆ ಅಭ್ಯಾಸಿಗಳಿಗೆ ಆಶ್ರಮದಿಂದ ತೆರಳಲೇ ಮನಸ್ಸಿರಲಿಲ್ಲ.



ಅಲುವಾ



ಹುಬ್ಬಳ್ಳಿ

### ಕೇರಳ

**ಅಲುವಾದಲ್ಲಿ** ಎರ್ನಾಕುಲಮ್ ಮತ್ತು ಇಡುಕ್ಕಿ ಜಿಲ್ಲೆಗಳಿಂದ ಅಭ್ಯಾಸಿಗಳು ಸತ್ಸಂಗದಂದು ಹಾಜರಿದ್ದರು. ಲಾಲಾಜಿಯರ ಬಗ್ಗೆ ಚಿಕ್ಕ ಭಾಷಣ ನಂತರ ನಾಟಕ ಪ್ರದರ್ಶನವಿತ್ತು. ಬೇರೆ ಬೇರೆ ಕೇಂದ್ರಗಳ ಅಭ್ಯಾಸಿಗಳು ಮತ್ತು ಪ್ರಶಿಕ್ಷಕರು ಹಾಜರಿದ್ದು ಲಾಲಾಜಿಯವರ ಬಗ್ಗೆ ತಮ್ಮ ತಮ್ಮ ಅನುಭವಗಳನ್ನು, ಅನಿಸಿಕೆಗಳನ್ನು ಹಂಚಿಕೊಂಡರು. ಸೊ.ಇ. ರಾಧಾಕೃಷ್ಣನ್ ಆಶ್ರಮದ ಬಗ್ಗೆ ತಮ್ಮ ಕವನವೊಂದನ್ನು ವಾಚಿಸಿದರು.

**ಕಾಸರಗೋಡು**ವಿನಲ್ಲಿ ಯುರೋಪ್‌ನಲ್ಲಿ ನಡೆದ ಕಾರ್ಯಾಗಾರದ ಕುರಿತಾದ ಸಾಕ್ಷ್ಯಚಿತ್ರ 'ಹೆವನ್' ಅನ್ನು ಪ್ರದರ್ಶಿಸಲಾಯಿತು. ನಂತರ ಭಾಷಣಗಳು, ಸುವರ್ಣ ಮೌನ, ಭಜನೆಗಳು ಮತ್ತು ಲಾಲಾಜಿಯರ ಬಗ್ಗೆ ಸಣ್ಣ ನಾಟಕವು ಇತ್ತು. ಕಾರ್ಯಕ್ರಮವು ಸತ್ಸಂಗದೊಂದಿಗೆ ಮುಗಿಯಿತು.

**ಹುಮನಾಬಾದ್‌ನ** ಕಾರ್ಯಕ್ರಮದಲ್ಲಿ ಗುಲ್ಬರ್ಗಾ ಮತ್ತು ಬೀದರ್ ಸುತ್ತಮುತ್ತಲಿನ ಸುಮಾರು 300 ಅಭ್ಯಾಸಿಗಳು ಭಾಗವಹಿಸಿದ್ದರು. ಅಲ್ಲಿನ ಸ್ಥಳೀಯ ಅಭ್ಯಾಸಿಗಳು ಅತ್ಯುತ್ತಮ ವ್ಯವಸ್ಥೆಯನ್ನು ಮಾಡಿದ್ದರು. ಬಹಳ ಮಂದಿ ಅಭ್ಯಾಸಿಗಳು ಲಾಲಾಜಿಯವರ ಬಗ್ಗೆ ಮಾತನಾಡಿದರು. ಮಕ್ಕಳು ಭರತ ನಾಟ್ಯ ಪ್ರದರ್ಶಿಸಿದರು. ಸೊ.ಎಸ್.ಎ. ಖಾಜಿ ಮತ್ತುವರ ಸಂಗಡಿಗರಿಂದ ಕೊಳಲು ವಾದನ ಕಾರ್ಯಕ್ರಮವಿತ್ತು.



ಹುಮನಾಬಾದ್


ಶ್ರೀ ಗಂಗಾನಗರ


ಜೋಧಪುರ


ಆಳ್ವಾರ್

## ರಾಜಸ್ಥಾನ

**ಶ್ರೀ ಗಂಗಾನಗರದಲ್ಲಿ**, ಸೋ. ಪಾರಸ್ ಪಾರೇಖ್‌ರವರ ಮನೆಯಲ್ಲಿ 120 ಅಭ್ಯಾಸಿಗಳು ಸೇರಿದ್ದರು. ಸತ್ಸಂಗಾನಂತರ ಲಾಲಾಜಿಯವರ ಜೀವನಚರಿತ್ರೆಯನ್ನು ಓದಲಾಯಿತು. ಸೋ. ಮುನ್ನಿ ಲಾಲ್‌ರವರು ಭಂಡಾರಗಳಲ್ಲಿ ಮತ್ತು ವೈಯಕ್ತಿಕ ಜೀವನದಲ್ಲಿ ಕೂಡಾ ಶಿಸ್ತನ್ನು ಕಾಪಾಡಿಕೊಳ್ಳುವುದು ಮತ್ತು ಸಹನೆಯನ್ನು ಸುಧಾರಿಸುವುದು ಹೇಗೆಂಬುದರ ಬಗ್ಗೆ ಮಾತನಾಡಿದರು. ಲಾಲಾಜಿಯವರ ಜೀವನದ ಬಗೆಗಿನ ಸಿಡಿಯನ್ನು ಪ್ರದರ್ಶಿಸಲಾಯಿತು. ಭೋಜನಾನಂತರ, ಗುರುಗಳ, 'ಸಚ್ಚಾ ಪ್ಯಾರ್' ಮತ್ತು 'ಪ್ಯಾರ್ ಬಢಾಯೇಂ' ಎಂಬ ಶೀರ್ಷಿಕೆಯುಳ್ಳ ಭಾಷಣಗಳ, ವೀಡಿಯೋ ಪ್ರದರ್ಶನವಿತ್ತು. ಪ್ರತಿಯೊಬ್ಬ ಅಭ್ಯಾಸಿಯೂ ಈ ಉತ್ಸವದಲ್ಲಿ ಮುಕ್ತಹೃದಯದಿಂದ ಭಾಗವಹಿಸಿದರು. ಕೇಂದ್ರ ಸಂಚಾಲಕರಾದ ಸೋ. ಮುನ್ನಿಯವರು ರವಿವಾರದ ಸತ್ಸಂಗ ಮತ್ತು ಭಂಡಾರಗಳಲ್ಲಿ ತಪ್ಪದೆ ಭಾಗವಹಿಸುವಂತೆ ಎಲ್ಲಾ ಅಭ್ಯಾಸಿಗಳನ್ನು ಪ್ರೇರೇಪಿಸಿದರು.

**ಜೋಧಪುರ** ಆಶ್ರಮದಲ್ಲಿ 385 ಅಭ್ಯಾಸಿಗಳು ಮತ್ತು 62 ಮಕ್ಕಳು ಸೇರಿದ್ದರು. ಅಭ್ಯಾಸಿಗಳು, ಅತ್ಯುತ್ತಮವಾಗಿ ಸಿದ್ಧಪಡಿಸಿದ 'ಗುರು ಮತ್ತು ಶಿಷ್ಯರ ನಡುವಿನ ಸಂಬಂಧ' ಎಂಬ ಕಿರುನಾಟಕವೊಂದನ್ನು ಪ್ರಸ್ತುತಪಡಿಸಿದರು. ಮಕ್ಕಳು ಅಮಿತ ಉತ್ಸಾಹ ಮತ್ತು ಪ್ರೇಮಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. ಲಾಲಾಜಿಯವರ ಜೀವನದ ಬಗೆಗಿನ ಸಾಕ್ಷ್ಯಚಿತ್ರವೊಂದನ್ನು ತೋರಿಸಿದ ನಂತರ, ಸಾಯಂಕಾಲದ ಸತ್ಸಂಗವಿತ್ತು.

**ಆಳ್ವಾರ್** ಆಶ್ರಮದಲ್ಲಿ 190 ಅಭ್ಯಾಸಿಗಳು ಇಡೀ ದಿನವನ್ನು ಸತ್ಸಂಗಗಳು, ಮಕ್ಕಳಿಗಾಗಿ ಆಟದ ಅವಧಿ ಮತ್ತು ಅಭ್ಯಾಸಿಗಳಿಗಾಗಿ 'ಒಂದು ನಿಮಿಷದ ಮಾತಿನ' ಅವಧಿಗಳಲ್ಲಿ ಕಳೆದರು. ಚಾರಿತ್ರ್ಯದ ಅನೇಕ ಸದ್ಗುಣಗಳಿಂದ ಮಾದರಿಯೆನಿಸಿದ ಲಾಲಾಜಿಯವರ ಜೀವನವನ್ನು ಸ್ಮರಿಸಲಾಯಿತು. ಗುರುಗಳು ಒತ್ತಿಹೇಳುತ್ತಿರುವ ಸ್ವಾರ್ಥರಹಿತ ಪ್ರೇಮ ಮತ್ತು ಸೇವೆಗಳೇ ದಿನದ ಪ್ರಧಾನ ತತ್ವಗಳಾಗಿದ್ದವು.

**ಭಿಲ್ವಾರ** ಆಶ್ರಮದಲ್ಲಿ, ಸಮೀಪದ ಹಳ್ಳಿಗಳಾದ ಷಾಹ್‌ಪುರ, ಗಂಗಾಪುರ, ಸಿಕಾರ್, ಬಿಜಯನಗರ್ ಮತ್ತು ಬನೇಡಗಳಿಂದ ಬಂದ ನೂರುಜನ ಅಭ್ಯಾಸಿಗಳು ಸೇರಿದ್ದರು. ಸತ್ಸಂಗದ ನಂತರ ಲಾಲಾಜಿಯವರ ಜೀವನದ ಮೇಲಿನ ಒಂದು ಪ್ರಸ್ತುತಿ ಮತ್ತು ಕೆಲವು ಭಜನೆಗಳಿದ್ದವು. ಕೆಲ ಅಭ್ಯಾಸಿಗಳು ಪುಸ್ತಕಗಳಿಂದ, ಲಾಲಾಜಿ ಮಹಾರಾಜರ ಬೋಧನೆಗಳು ಮತ್ತು ಕೆಲವು ಸ್ಫೂರ್ತಿದಾಯಕವಾದ ಘಟನೆಗಳನ್ನು ಓದಿದರು. ಯುವ ಅಭ್ಯಾಸಿಗಳು, 'ವಿಧೇಯತೆ' ಎಂಬ ಶೀರ್ಷಿಕೆಯ ನಾಟಕವೊಂದನ್ನು ಅಭಿನಯಿಸಿದರು.

## ಮಹಾರಾಷ್ಟ್ರ

**ಮುಂಬಯಿನ** ಪನ್ವೇಲ್ ಆಶ್ರಮದಲ್ಲಿ ಸುಮಾರು 600 ಅಭ್ಯಾಸಿಗಳು ಸೇರಿದ್ದರು. ಲಾಲಾಜಿ ಮಹಾರಾಜರ ಜೀವನದ ವಿವಿಧ ಘಟನೆಗಳಿಗೆ ಬೆಳಕುಬೀರುವ ಕಿರುಚಿತ್ರಣವೊಂದನ್ನು ಕಿರುನಾಟಕಗಳು, ಸಾಹಿತ್ಯಪಠಣ ಮತ್ತು ಭಜನೆಗಳ ಮೂಲಕ ಬಿತ್ತರಿಸಲಾಯಿತು. ಮಧ್ಯಾಹ್ನದೂಟದ ನಂತರ ಲಾಲಾಜಿಯವರ ಬಗೆಗಿನ ಚಲನಚಿತ್ರವನ್ನು ಪ್ರದರ್ಶಿಸಲಾಯಿತು.

**ಪೂನಾ**ದಲ್ಲಿ, ಸತ್ಸಂಗ, ಭೋಜನ ಮತ್ತು ಭಜನೆಗಳ ನಂತರ ಗುರುಗಳು ಸತ್ಸಂಗಗಳ ಗಂಭೀರತೆಯ ಬಗ್ಗೆ ಉಲ್ಲೇಖಿಸಿರುವುದರ ತುಣುಕೊಂದನ್ನು ಪ್ರಸ್ತುತಪಡಿಸಲಾಯಿತು. ತದನಂತರ 'ಚಿರಂತನ ಸತ್ಯ'ದಿಂದ ಸಂಗ್ರಹಿಸಿದ ತುಣುಕುಗಳ ಮೂಲಕ ಲಾಲಾಜಿಯವರ ಜೀವನದ ಬಗೆಗಿನ ಪ್ರಸ್ತುತಿಯೊಂದಿತ್ತು. ಲಾಲಾಜಿಯವರ ಚಲನಚಿತ್ರದ ತುಣುಕುಗಳನ್ನು ಪ್ರದರ್ಶಿಸಲಾಯಿತು ಮತ್ತು ಪ್ರತಿಯೊಂದು ತುಣುಕಿನ ಪ್ರದರ್ಶನದ ನಂತರ ಅಭ್ಯಾಸಿಗಳಿಗೆ ಅಂತರಾವಲೋಕನ ಮತ್ತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಸಮಯಾವಕಾಶ ನೀಡಲಾಯಿತು.

ಅಭ್ಯಾಸಿಗಳು ಲಾಲಾಜಿಯವರ ವ್ಯಕ್ತಿತ್ವದ ಸೂಕ್ಷ್ಮತಮ ಅಂಶಗಳ ಮೇಲೆ ಬೆಳಕುಚೆಲ್ಲಿ, ಅವರು ಎಲ್ಲರಿಗೂ ಒಂದೇ ಆಗಿದ್ದರು. ಪ್ರಾಪಂಚಿಕ ಮತ್ತು ಆಧ್ಯಾತ್ಮಿಕ ಸಮತೋಲನದೊಂದಿಗೆ ಲಾಲಾಜಿಯವರ ಜೀವನವು ಸುಂದರವಾಗಿ ಹೆಣೆಯಲ್ಪಟ್ಟಿತ್ತು ಎಂಬುದನ್ನು ಗಮನಿಸಿದರು. ಸಾಯಂಕಾಲದ ಸತ್ಸಂಗದ ಮೊದಲು ಭರತನಾಟ್ಯ ಪ್ರದರ್ಶನವಿತ್ತು.

ಔರಂಗಾಬಾದ್‌ನ ಸಮೀಪದ **ಲಾಸುರ್**ನಲ್ಲಿ, ಕಾರ್ಯಕ್ರಮಕ್ಕೆ ಸಮೀಪದ ಕೇಂದ್ರಗಳ ಸುಮಾರು 150 ಅಭ್ಯಾಸಿಗಳು ಸೇರಿದ್ದರು. ಸೋ. ಸಂಜಯ್ ಭಾಟಿಯಾರವರು ತನ್ನ ಜೀವನದ ಮೇಲೆ ಸಹಜಮಾರ್ಗದಿಂದಾದ ಪರಿಣಾಮದ ಕುರಿತಾಗಿ ಮತ್ತು ಸೋ. ಅನಸೂಯರವರು ರವಿವಾರದ ಸತ್ಸಂಗದ ಮಹತ್ವದ ಕುರಿತಾಗಿ ಮಾತನಾಡಿದರು. ಸೋ. ಸುನಿಲ್ ಚಂದ್ರನ್‌ರವರು ಗುರುವಿನ ಪ್ರಾಮುಖ್ಯತೆಯ ಬಗ್ಗೆ ಆಕರ್ಷಕವಾಗಿ ಪ್ರಸ್ತುತಪಡಿಸಿದರು. ಸಾಯಂಕಾಲದ ಸತ್ಸಂಗದೊಂದಿಗೆ ದಿನವು ಮುಕ್ತಾಯಗೊಂಡಿತು.

## ಅಸ್ಸಾಂ

**ಗುವಾಹಟಿ**ಯಲ್ಲಿ ಸಮಾರಂಭವು ಸತ್ಸಂಗದೊಂದಿಗೆ ಆರಂಭವಾಯಿತು. ತದನಂತರ ಲಾಲಾಜಿಯವರ ಸರಳ ಜೀವನಶೈಲಿ ಮತ್ತು ಅವರು ತನ್ನ ಸಾಂಸಾರಿಕ ಸಮಸ್ಯೆಗಳನ್ನು ನಿಭಾಯಿಸಿದ ರೀತಿಯ ಕುರಿತಾಗಿ ಒಂದು ಭಾಷಣವಿತ್ತು. ಇಕೋ ವಾರ್ತಾಪತ್ರದ ಜನವರಿ ಸಂಚಿಕೆಯ ಮೇಲೆ ಮಾಡಿದ ರಸಪ್ರಶ್ನೆಯು ಆ ಪತ್ರಿಕೆಯನ್ನೋದುವಂತೆ ಅಭ್ಯಾಸಿಗಳನ್ನು ಪ್ರೇರೇಪಿಸಿತ್ತು. ಮಕ್ಕಳಿಗೋಸ್ಕರ ಒಂದು ಚಿತ್ರಬರೆಯುವ ಸ್ಫರ್ಧೆಯನ್ನೂ ಏರ್ಪಡಿಸಲಾಗಿತ್ತು.


ಪೂನಾ


ಗುವಾಹಟಿ


ಗುವಾಹಟಿ


ಮಿರ್ಝಾಪುರ


ಲಖನೌ

## ಉತ್ತರಪ್ರದೇಶ

**ಲಖನೌ** ಆಶ್ರಮದಲ್ಲಿ ಸುಮಾರು 500 ಮಂದಿ ಅಭ್ಯಾಸಿಗಳು ಸೇರಿದ್ದರು. ಸತ್ಸಂಗದ ನಂತರ ಲಾಲಾಜಿಯವರ ಕಥೆಯನ್ನು ಓದಲಾಯಿತು. ತರುವಾಯ ಪ್ರದರ್ಶಿತವಾದ ಲಾಲಾಜಿಯವರ ಬಗೆಗಿನ ಚಲನಚಿತ್ರವು ಪ್ರತಿಯೊಬ್ಬರೂ ತಮ್ಮ ಜೀವನವನ್ನು ಅಂತರಾವಲೋಕಿಸಲು ಪ್ರೇರೇಪಿಸಿತು. ಸೋದರಿಯರು ಭಜನೆಗಳನ್ನು ಹಾಡಿದರು. ಮಕ್ಕಳು ನೃತ್ಯವೊಂದನ್ನು ಮಾಡಿದರು ಮತ್ತು 'ಜೀವನದಲ್ಲಿ ಏನೇ ಆದರೂ ಅದು ಒಳಿತಿಗಾಗಿಯೇ' ಎಂಬ ನಾಟಕವೊಂದನ್ನು ಯುವ ಅಭ್ಯಾಸಿಗಳು ಅಭಿನಯಿಸಿದರು. ವಾತಾವರಣವು ಸೂಕ್ಷ್ಮ ಹಾಗೂ ಕೃಪಾಭರಿತವಾಗಿದ್ದು ಎಲ್ಲರೂ ತಮ್ಮ ಹೃದಯಗಳಲ್ಲಿ ಗುರುಕೃಪೆಯನ್ನು ತುಂಬಿಕೊಂಡು ಮನೆಗಳಿಗೆ ಮರಳಿದರು.

**ಮಿರ್ಝಾಪುರದಲ್ಲಿ** ಹೊಸದಾಗಿ ಖರೀದಿಸಿದ ಆಶ್ರಮ ಭೂಮಿಯಲ್ಲಿ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದ್ದು ಅಲಹಾಬಾದ್ ಕೇಂದ್ರ ಸಂಚಾಲಕರಾದ ಸೋ. ಆರ್.ಆರ್.ಕೆ. ತ್ರಿವೇದಿಯವರೂ ಉಪಸ್ಥಿತರಿದ್ದರು. ಆ ಸಂದರ್ಭದಲ್ಲಿ ಕೆಲ ಪ್ರಶಿಕ್ಷಕರು ಮಾತನಾಡಿದರು. ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಗುರುಗಳ ವೀಡಿಯೋ ಪ್ರದರ್ಶನವಿದ್ದು ಸತ್ಸಂಗದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

## ಒರಿಸ್ಸಾ

**ಕಟಕ್**ನಲ್ಲಿ ಒರಿಸ್ಸಾ ವಲಯದ 136 ಅಭ್ಯಾಸಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸತ್ಸಂಗದ ನಂತರ ಅಭ್ಯಾಸಿಗಳು, ಮನುಕುಲದ ಆಧ್ಯಾತ್ಮಿಕ ಉನ್ನತಿಗಾಗಿ ಲಾಲಾಜಿ ಮಹಾರಾಜರ ಬೋಧನೆಗಳ ಬಗೆಗಿನ ಚರ್ಚೆಯಲ್ಲಿ ಪಾಲ್ಗೊಳ್ಳಲು ಮತ್ತೆ ಸೇರಿದರು. ಚರ್ಚೆಯು ಲವಲವಿಕೆಯಿಂದ ಕೂಡಿದ್ದು ಯುವ ಅಭ್ಯಾಸಿಗಳ ಭಾಗವಹಿಸುವಿಕೆಯು ಪ್ರೋತ್ಸಾಹದಾಯಕವಾಗಿ ಕಂಡುಬಂತು. ಪ್ರಶಿಕ್ಷಕರ ಸಭೆ, ಪರಿಚಯಾತ್ಮಕ ಸಭೆ(ಹದಿನೈದು ಮಂದಿ) ಮತ್ತು ಒಂದು ಸಾಂಸ್ಕೃತಿಕ ಕಾರ್ಯಕ್ರಮ ಇವುಗಳನ್ನೂ ಸಂಘಟಿಸಲಾಗಿತ್ತು.

## ತಮಿಳುನಾಡು

**ತಿರುಪ್ಪೂರದ** ಡೈಮಂಡ್ ಪಾರ್ಕ್, ತಿರುಪ್ಪೂರ ಮತ್ತು ಸಮೀಪದ ಕೇಂದ್ರಗಳ 750 ಮಂದಿ ಅಭ್ಯಾಸಿಗಳಿಂದ ತುಂಬಿತ್ತು. ಸತ್ಸಂಗಗಳಲ್ಲದೆ, ಭಾಷಣಗಳು ಮತ್ತು ಗುರುತ್ರಯರ ಬಗೆಗಿನ ಪ್ರಸ್ತುತಿಗಳು ಆನಂದಮಯ ವಾತಾವರಣವೊಂದನ್ನು ಸೃಷ್ಟಿಸಿದ್ದವು. ಒಮ್ಮೊಮ್ಮೆ ಗುರುವರೇಣ್ಯರ ಜೀವನಗಳನ್ನು ಆರ್ದ್ರತೆ ಮತ್ತು ಮಾರ್ದವತೆಯಿಂದ ಪ್ರಸ್ತಾವಿಸಿದಾಗ ಅದಕ್ಕನುಗುಣವಾದ ಪ್ರತಿಸ್ಪಂದನೆಯಲ್ಲಿ ಹೃದಯಗಳು ಕರಗಿಹೋಗಿದ್ದವು. ಅಭ್ಯಾಸಿಗಳಿಗೆ ರುಚಿಕಟ್ಟಾದ ಉಪಾಹಾರ, ಭೋಜನ ಮತ್ತು ಹೈ ಟೀ ಒದಗಿಸಲಾಗಿತ್ತು. ಅಭ್ಯಾಸಿಗಳೆಲ್ಲ ತಮ್ಮ ಹೃದಯಗಳನ್ನು ಗುರುಕೃಪೆಯಿಂದ ತುಂಬಿಕೊಂಡು ಮನೆಗೆ ತೆರಳಿದರು.


ತಿರುಪ್ಪೂರ

## ಉತ್ತರಖಂಡ

**ಕಾಶಿಪುರ** ಕೇಂದ್ರದಲ್ಲಿ, ಸತ್ಸಂಗಾನಂತರ ಲಾಲಾಜಿ ಮಹಾರಾಜರ ಜೀವನದ ಕುರಿತಾಗಿ ಒಂದು ಭಾಷಣವಿತ್ತು. ಉಪಸ್ಥಿತರಿದ್ದ 45 ಅಭ್ಯಾಸಿಗಳನ್ನು ಗುಂಪುಗಳಾಗಿ ವಿಂಗಡಿಸಿ ಲಾಲಾಜಿಯವರ ಜೀವನದ ಗುಣಗಳನ್ನು ಚರ್ಚಿಸಲಾಯಿತು. ಸ್ಪಷ್ಟೀಕರಣ ಅವಧಿಯ ನಂತರ ಗುಂಪುಗಳಲ್ಲಿ ಚರ್ಚಿತವಾದ ವಿಚಾರಾಂಶಗಳನ್ನು ಪ್ರಸ್ತುತಪಡಿಸಲಾಯಿತು. ಎಲ್ಲರೂ ಆದಿಗುರುಗಳ ಮೇಲಿನ ಭಕ್ತ್ಯಾದರ, ಗಾಢಗೌರವ, ಪ್ರೇಮಗಳಿಂದ ತುಂಬಿ ಸಾದ್ಯಂತವಾಗಿ ಅವರ ಸ್ಮರಣೆಯಲ್ಲಿ ಉಳಿದಿದ್ದರು. ಊಟವಾದ ನಂತರ ಕೆಲವು ಭಜನೆಗಳನ್ನು ಹಾಡಲಾಯಿತು ಮತ್ತು ಸಾಧನೆಯ ಮೇಲಿನ ಸ್ಪಷ್ಟೀಕರಣಗಳ ನಂತರ ಸತ್ಸಂಗದೊಂದಿಗೆ ದಿನವು ಮುಕ್ತಾಯವಾಯಿತು.

## ಜಾರ್ಖಂಡ್

**ಛಾತ್ರ**ದಲ್ಲಿ ಸಮಾರಂಭಕ್ಕಾಗಿ ಛಾತ್ರ ಮತ್ತು ಹಝಾರಿಬಾಗ್ ಕೇಂದ್ರಗಳ ಸುಮಾರು 30 ಅಭ್ಯಾಸಿಗಳು ಸೇರಿದ್ದರು. ಪ್ರಶ್ನೋತ್ತರ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿತ್ತು.

ರಾಂಚಿ ಕೇಂದ್ರವನ್ನು ಪೂರ್ಣದಿನದ ಕಾರ್ಯಕ್ರಮಕ್ಕಾಗಿ ಚೆನ್ನಾಗಿ ಅಲಂಕರಿಸಲಾಗಿತ್ತು. ಲಾಲಾಜಿಯವರ ಜೀವನದ ಚಲನಚಿತ್ರವನ್ನು ಪ್ರದರ್ಶಿಸಲಾಯಿತು. ನಂತರ ಕೆಲ ಭಜನೆಗಳಿದ್ದವು.

ಜೆಮ್‌ಶೆಡ್‌ಪುರದಲ್ಲಿ 38 ಅಭ್ಯಾಸಿಗಳು ಸೇರಿದ್ದರು. 'ಚಿರಂತನ ಸತ್ಯ'ಪುಸ್ತಕವನ್ನು ಓದಿದ ನಂತರ ಅಲ್ಲಿ ಒಂದು ಭಾಷಣ ಮತ್ತು ಪ್ರಶ್ನೋತ್ತರ ಅವಧಿ ಇತ್ತು.


ಕಾಶಿಪುರ


ಕಾಶಿಪುರ

# ಆಶ್ರಮ ಬೆಳವಣಿಗೆ

## ಜಮ್ಮು ಆಶ್ರಮ



ಜಮ್ಮು ಆಶ್ರಮ

ಇದು ಭಾರತದ ಉತ್ತರತುದಿಯ ರಾಜ್ಯ ಜಮ್ಮು ಮತ್ತು ಕಾಶ್ಮೀರದಲ್ಲಿ ಉದಿಸಿದ ಮೊತ್ತಮೊದಲ ಆಶ್ರಮವಾಗಿದ್ದು ರಣಜಿತ್‌ಪುರ ಹಳ್ಳಿ, ಗೋಲ್‌ಗುಜ್ರಾಲ್, ಜಮ್ಮುವಿನಲ್ಲಿದ್ದು ರೈಲು ನಿಲ್ದಾಣದಿಂದ 10 ಕಿ.ಮೀ. ದೂರ, ವಿಮಾನ ನಿಲ್ದಾಣದಿಂದ 11 ಕಿ.ಮೀ. ದೂರ ಮತ್ತು ಬಸ್ ನಿಲ್ದಾಣದಿಂದ 6 ಕಿ. ಮೀ. ದೂರದಲ್ಲಿದೆ.

ಒಂದು ಎಕರೆ ಸ್ಥಳವನ್ನು 2011ರ ಫೆಬ್ರವರಿ 2ರಂದು ಆಶ್ರಮಕ್ಕೆಂದು ಕೊಳ್ಳಲಾಯಿತು. ಸುಮಾರು 2800ಚ. ಅಡಿ ವಿಸ್ತಾರದ ಪಾಕಶಾಲೆ/ಭೋಜನಶಾಲಾ ವಿಭಾಗವನ್ನು ನಿರ್ಮಿಸಲಾಗಿದೆ. ಧ್ಯಾನಮಂದಿರವನ್ನು ನಿರ್ಮಿಸುವ ವರೆಗೆ ಇದನ್ನು ಧ್ಯಾನಕ್ಕಾಗಿ ಉಪಯೋಗಿಸಲಾಗುವುದು.

ಗುರುಗಳು 2012ರ ಜನವರಿ 11ರಂದು ತನ್ನ ಚೆನ್ನೈ ಕಛೇರಿಯಲ್ಲಿ ಜಮ್ಮು ಆಶ್ರಮದ ಛಾಯಾಚಿತ್ರಗಳು ಮತ್ತು ವೀಡಿಯೋ ದೃಶ್ಯಾವಳಿಯ ಪ್ರಸ್ತುತಿಯೊಂದನ್ನು ವೀಕ್ಷಿಸಿದರು. ಅದನ್ನು ವೀಕ್ಷಿಸಿದ ಬಳಿಕ ಗುರುಗಳು, "ನಾನು ಈಗಾಗಲೇ ಆಶ್ರಮವನ್ನು ಪ್ರವೇಶಿದ್ದೇನೆ ಮತ್ತು ಆಶ್ರಮವು ಉದ್ಘಾಟಿಸಲ್ಪಟ್ಟಿದೆ, ಈ ದಿನವೇ ಅಲ್ಲಿ ಧ್ಯಾನವನ್ನು ಪ್ರಾರಂಭಿಸಿ." ಎಂದರು. ಮೊದಲ ಸತ್ಸಂಗವು ಅದೇ ದಿನ ಸಾಯಂಕಾಲ 5.00 ಗಂಟೆಗೆ ನೆರವೇರಿತು ಮತ್ತು ತದನಂತರ ತಪ್ಪದೇ ನಡೆಯುತ್ತಿದೆ.


ಥಾರ್‌ವಾಯಿ ಆಶ್ರಮ




ಪಯ್ಯನೂರ್ ಆಶ್ರಮ

## ಥಾರ್‌ವಾಯಿ, ಉತ್ತರಪ್ರದೇಶ

1983ರಲ್ಲಿ ಅಲಹಾಬಾದ್ ನಗರದಿಂದ 13 ಕಿ.ಮೀ. ದೂರದಲ್ಲಿರುವ ಥಾರ್‌ವಾಯಿಯ ಕೆಲವು ಜನ ಮಿಷನ್‌ಗೆ ಪ್ರವೇಶಿಸಿದರು ಮತ್ತು ಅಲಹಾಬಾದ್‌ನಲ್ಲಿ ಸತ್ಸಂಗಕ್ಕೆ ಹಾಜರಾಗತೊಡಗಿದರು. ಪ್ರಶಿಕ್ಷಕರಾದ ಸೋ. ಎಲ್.ಕೆ. ತ್ರಿಪಾಠಿ ಮತ್ತು ಸೋ. ಸುಭಾಷ್ ಚಂದ್ರ ಮಿಶ್ರಾರವರ ಪ್ರಯತ್ನದಿಂದ ಸುಮಾರು 800 ಚ.ಮೀ. ಭೂಮಿಯನ್ನು ಖರೀದಿಸಿ, 2006ರ ಮಾರ್ಚ್ 22ರಂದು ನೋಂದಾಯಿಸಲಾಯಿತು.

ಸ್ಥಳೀಯ ಶಾಸಕರು ಮತ್ತು ವಿಧಾನಸಭಾ ಸದಸ್ಯರ ನಿಧಿಯ ಆರ್ಥಿಕ ನೆರವಿನಿಂದ 1000 ಚ. ಅಡಿಗಳ (25X40) ವಿಸ್ತಾರದ ಧ್ಯಾನಮಂದಿರದ ನಿರ್ಮಾಣವಾಯಿತು ಮತ್ತು ಹೆಚ್ಚಿನ ಸೌಲಭ್ಯಗಳನ್ನು ಅಭ್ಯಾಸಿಗಳ ದೇಣಿಗೆಯಿಂದ ಭರಿಸಲಾಯಿತು. ಕಾರ್ಯದರ್ಶಿಗಳಾದ ಸೋ. ಉಮಾಶಂಕರ ಬಾಜಪೈಯವರು 2011ರ ಡಿಸೆಂಬರ್ 11ರಂದು ಸತ್ಸಂಗವನ್ನು ನಡೆಸಿಕೊಟ್ಟು ಧ್ಯಾನಮಂದಿರವನ್ನು ಔಪಚಾರಿಕವಾಗಿ ಉದ್ಘಾಟಿಸಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಅಲಹಾಬಾದ್ ಮತ್ತು ಸಮೀಪದ ಕೇಂದ್ರಗಳ ಅಭ್ಯಾಸಿಗಳು ದೊಡ್ಡ ಸಂಖ್ಯೆಯಲ್ಲಿ ನೆರೆದಿದ್ದರು.

## ಪಯ್ಯನೂರ್ ಆಶ್ರಮ, ಕೇರಳ

ಆಶ್ರಮವು ಕಣ್ಣೂರ್ ಜಿಲ್ಲೆಯ ಪಯ್ಯನ್ನೂರ್-ಚೆನ್ನೈ ರಸ್ತೆಯಲ್ಲಿ ಪಯ್ಯನ್ನೂರ್ ನಿಂದ 10 ಕಿ. ಮೀ. ದೂರದಲ್ಲಿದೆ. ವಿಸ್ತೃತ ದೃಶ್ಯಾವಳಿಯ ನೋಟವುಳ್ಳ ಮೂರು ಎಕರೆಯ ಈ ಸುಂದರ ನಿವೇಶನವನ್ನು 2007ರಲ್ಲಿ ಖರೀದಿಸಲಾಯಿತು ಮತ್ತು ಅಭ್ಯಾಸಿಗಳಿಂದ ಮಿಷನಿಗೆ ದಾನವಾಗಿ ಕೊಡಲಾಯಿತು. ನಿವೇಶನಕ್ಕೆ ತಾಗಿಕೊಂಡಂತೆ ವಸತಿಪ್ರದೇಶವೊಂದನ್ನು ಅಭ್ಯಾಸಿಗಳು ರಚಿಸಿಕೊಂಡಿದ್ದಾರೆ. 100 ಅಭ್ಯಾಸಿಗಳಿಗೆ ಸಾಕಾಗುವ ತಾತ್ಕಾಲಿಕ ಧ್ಯಾನಮಂದಿರವೊಂದನ್ನು ನಿರ್ಮಿಸಲಾಗಿದೆ. ಪ್ರಸ್ತುತ 60-70 ಅಭ್ಯಾಸಿಗಳು ನಿಯತವಾಗಿ ರವಿವಾರದ ಸತ್ಸಂಗಕ್ಕೆ ಹಾಜರಾಗುತ್ತಾರೆ.

2012ರ ಜನವರಿ 29ರ ರವಿವಾರದ ಸತ್ಸಂಗದ ನಂತರ, ಸುಮಾರು 75 ಅಭ್ಯಾಸಿಗಳು ಸ್ಥಳದಲ್ಲಿ ಸೇರಿದ್ದರು ಮತ್ತು ಕೇಂದ್ರ ಸಂಚಾಲಕರಾದ ಸೋ. ಕುಂಞಿಕಣ್ಣನ್‌ರವರು ಪಾಕಶಾಲೆ ಮತ್ತು ಶೌಚಾಲಯ ವಿಭಾಗಗಳಿಗೆ ಶಂಕುಸ್ಥಾಪನೆ ಮಾಡಿದರು. ತದನಂತರ ಆ ಸ್ಥಳದಲ್ಲಿ ಎಲ್ಲರೂ ಧ್ಯಾನಮಾಡಿದರು. ದೊಡ್ಡದಾದ ಧ್ಯಾನಮಂದಿರ ಮತ್ತು ಗುರುಗಳ ಕುಟೀರಗಳ ನಿರ್ಮಾಣಕ್ಕಾಗಿ ಇನ್ನಷ್ಟು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

## ಶಿಕ್ಷಕರ ಅಭಿವೃದ್ಧಿ ಕಾರ್ಯಕ್ರಮ–2

### ಬನಶಂಕರಿ ಆಶ್ರಮ, ಬೆಂಗಳೂರು



ಈ ಕಾರ್ಯಕ್ರಮವನ್ನು ಬೆಂಗಳೂರಿನ ಬನಶಂಕರಿ ಆಶ್ರಮದಲ್ಲಿ ಮೂವತ್ತಾರು ಅಭ್ಯಾಸಿಗಳಿಗಾಗಿ ಮೂರು ಹಂತಗಳಲ್ಲಿ (ಅಕ್ಟೋಬರ್ 16, ನವೆಂಬರ್ 5–6, ನವೆಂಬರ್ 26–27, 2011) ನಡೆಸಲಾಯಿತು. ಭಾಗಿಗಳ ಅಭ್ಯಾಸ ಮತ್ತು ಗುರುಗಳೊಂದಿಗಿನ ಅವರ ಸಂಬಂಧಗಳನ್ನು ಗಾಢಗೊಳಿಸುವುದು, ಸಹಜಮಾರ್ಗದ ಕುರಿತು ಆಕಾಂಕ್ಷಿಗಳಿಗೆ ಪರಿಣಾಮಕಾರಿಯಾಗಿ ವಿವರಿಸಲು ಸಾಧ್ಯವಾಗುವಂತೆ ಸಹಜಮಾರ್ಗದ ಬಗ್ಗೆ ಆಳವಾದ ಜ್ಞಾನ ಮೂಡಿಸುವುದು ಈ ಕಾರ್ಯಕ್ರಮದ ಧ್ಯೇಯವಾಗಿತ್ತು.

ಪ್ರಶಿಕ್ಷಣ ಕಾರ್ಯಕ್ರಮವು ಸಮೂಹಚರ್ಚೆಯಿಂದ ಶುರುವಾಗಿ, ನಂತರ ಅಭ್ಯಾಸಿಗಳ ತಂಡದೊಡನೆ ಆಯ್ದ ವಿಷಯದ ಬಗ್ಗೆ ಮಾತನಾಡಲಾಯಿತು. ಅವರು ವೇದಿಕೆಯ ಮೇಲೆ ಆಯ್ದ ಉಲ್ಲೇಖಗಳ ಅರ್ಥವನ್ನು 2–3 ನಿಮಿಷಗಳಲ್ಲಿ ವಿವರಿಸಿದರು. ಕೊನೆಯಲ್ಲಿ ಅವರು ಒಂದೊಂದು ವಿಷಯವನ್ನು ಅಭ್ಯಾಸಿಗಳು, ವಿದ್ಯಾರ್ಥಿಗಳು ಮತ್ತು ಗೃಹಿಣಿಯರ ಪ್ರೇಕ್ಷಕ ತಂಡಗಳಿಗೆ 20 ನಿಮಿಷಗಳ ಕಾಲ ವಿವರಿಸಿದರು. ತಮ್ಮ ವಿಷಯಜ್ಞಾನವನ್ನು ವ್ಯಕ್ತಪಡಿಸಿದ ಭಾಗಿಗಳ ಸಂವಹನ ಕಲೆಯನ್ನು ಗಮನಿಸಿ ನಿರ್ಣಾಯಕ ತಂಡದ ಸದಸ್ಯರು ಕೆಲವು ಸುಧಾರಣಾ ಸಲಹೆಗಳನ್ನು ನೀಡಿದರು.

ಈ ಕಾರ್ಯಕ್ರಮವನ್ನು ಸೋ.ಬಿ. ಶ್ರೀನಿವಾಸರವರೊಂದಿಗೆ ಸೋದರರಾದ ಜಿ.ಸುಬ್ರಮಣ್ಯ, ಕೃಷ್ಣಮೂರ್ತಿ, ಪ್ರಭಾಕರ್, ಜಿ.ಸತ್ಯನಾರಾಯಣ ಮತ್ತು ಸೋ. ಮಾಧುರಿಯವರು ಆಯೋಜಿಸಿದ್ದರು.


## ಕ್ರೀಡಾದಿನ

### ಜೈಪುರ, ರಾಜಸ್ಥಾನ

ಜನವರಿ 1, 2012ರಂದು ಜೈಪುರ ಕೇಂದ್ರದಲ್ಲಿ ಕ್ರೀಡಾದಿನವನ್ನು ಆಯೋಜಿಸಲಾಗಿತ್ತು. ಅಭ್ಯಾಸಿಗಳನ್ನು ಒಟ್ಟಾಗಿಸಲು ನಡೆಸಿದ ಈ ಕಾರ್ಯಕ್ರಮದಲ್ಲಿ ಸುಮಾರು 120 ಅಭ್ಯಾಸಿಗಳು ಭಾಗವಹಿಸಿದ್ದರು. ನೆಗೆದು ಓಡುವ ಪಂದ್ಯ, ಹಗ್ಗ ಎಳೆದಾಟ, ಹಿರಿಯನಾಗರೀಕರ ಓಟ ಸ್ಪರ್ಧೆ ಇತ್ಯಾದಿ ಆಟಗಳಿದ್ದವು. ವಿಜೇತರಿಗೆ ಮತ್ತು ಶಿಸ್ತಿನಿಂದ ವರ್ತಿಸಿದ ಮಕ್ಕಳಿಗೂ ಸಹ ಬಹುಮಾನಗಳನ್ನು ನೀಡಲಾಯಿತು. ವರ್ಷದ ಮೊದಲ ದಿನದಂದು ನಡೆದ ಚಟುವಟಿಕೆಯು ಪಾಲ್ಗೊಂಡ ಅಭ್ಯಾಸಿಗಳ ಮನದಲ್ಲಿ ಆಟಗಾರನ ಉತ್ಸಾಹ, ಭ್ರಾತೃತ್ವ ಮತ್ತು ಶಿಸ್ತನ್ನು ಉದ್ದೀಪಿಸಿತು.

## ಸಾಧನೆ, ಗುರಿ ಮತ್ತು ಆಕಾಂಕ್ಷೆಯ ಕುರಿತು ಯುವಸಭೆ

### ಹೈದರಾಬಾದ್




ಹೈದರಾಬಾದ್‌ನ ವಲಯಾಶ್ರಮದಲ್ಲಿ ಫೆಬ್ರುವರಿ 10–12,2012ರಂದು ನಡೆದ ಸಭೆಯಲ್ಲಿ ಐವತ್ತೈದು ಅಭ್ಯಾಸಿಗಳು ಮತ್ತು ಹನ್ನೆರಡು ಪ್ರಶಿಕ್ಷಕರು ಭಾಗವಹಿಸಿದ್ದರು. ಗುರುಗಳ ಸೂಕ್ತಿಗಳು, SRCM ರಿಟ್ರೀಟ್ ಕೇಂದ್ರಗಳ ಚಿತ್ರಗಳು ವಾತಾವರಣವನ್ನು ಪ್ರೇರಿತಗೊಳಿಸಿದವು.

ಸಾಧನೆ ಮತ್ತು ದಿನಚರಿ ಬರವಣಿಗೆಯ ಬಗ್ಗೆ ಇದ್ದ ಮೊದಲಿನ ಅವಧಿಯ ನಂತರ ಎಲ್ಲಾ ಭಾಗಿಗಳೂ ವೈಯುಕ್ತಿಕ ಬೈಠಕುಗಳನ್ನು ತೆಗೆದುಕೊಳ್ಳುವುದರ ಜೊತೆಗೆ ತಮ್ಮ ಪ್ರತಿನಿತ್ಯದ ಸಾಧನೆಯ ತೊಡಕುಗಳ ನಿವಾರಣೆಯ ಬಗ್ಗೆ ಪ್ರಶಿಕ್ಷಕರೊಂದಿಗೆ ಚರ್ಚಿಸಿದರು.

ಶನಿವಾರದಂದು ಗುರುಗಳ ಎರಡು ಉಪನ್ಯಾಸಗಳ ಹಸ್ತಪತ್ರಿಕೆಯನ್ನು ಓದಲು ಮತ್ತು ಅವಲೋಕಿಸಲು ನೀಡಲಾಯಿತು. ಭೋಜನದ ನಂತರ ಅಭ್ಯಾಸಿಗಳು ಭಾಗವಹಿಸಿದ ಆಟಗಳು ಅವರಿಗೆ ತಮ್ಮ ಬಾಲ್ಯವನ್ನು ನೆನಪಿಗೆ ತಂದವು.

ಸೋ. ಮಲ್ಲಿಕ್‌ರವರು ಭಾಗಿಗಳನ್ನು ಕುರಿತು ಮಾತನಾಡಿದರು ಮತ್ತು ಸೋ.ಬಾಲಾಜಿಯವರು "ಗುರಿ"ಯ ಬಗ್ಗೆ ಮಾತನಾಡಿದರು. ಭಾಗಿಗಳು ನಂತರ ಸಹಜಮಾರ್ಗದ ಧ್ಯೇಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ಮತ್ತು ಅದು ಹೇಗೆ ಅಭ್ಯಾಸದ ಜೊತೆಗೆ ವಿಕಸನಗೊಂಡಿತು ಎನ್ನುವುದನ್ನು ವ್ಯಕ್ತಪಡಿಸಿದರು. ರಾತ್ರಿಯ ಭೋಜನದ ನಂತರ ದೃಶ್ಯತುಣುಕನ್ನು ಪ್ರದರ್ಶಿಸಲಾಯಿತು.

ಭಾನುವಾರದ ವಿಷಯವು ಚಾರಿತ್ರ್ಯನಿರ್ವಹಣೆಯ ಪ್ರಾಮುಖ್ಯತೆಯ ಕಡೆ ಕೇಂದ್ರೀಕೃತವಾಗಿತ್ತು. 'ಚಾರಿತ್ರ್ಯನಿರ್ವಹಣೆ'ಯ ಮೇಲಿನ ಗುರುಗಳ ಇತ್ತೀಚಿನ ಉಪನ್ಯಾಸದ ಹಸ್ತಪತ್ರಿಕೆಯನ್ನು ವಿತರಿಸಿ ನಂತರ ಸೋ. ಅರ್ಚನಾರವರು ಸರಳ ಬದಲಾವಣೆಗಳನ್ನು ಅಳವಡಿಸಿಕೊಳ್ಳುವುದರಿಂದ ನಮ್ಮ ಆಕಾಂಕ್ಷೆಗಳಿಗನುಗುಣವಾಗಿ ಜೀವನವನ್ನು ರೂಪಿಸಿಕೊಳ್ಳುವ ಬಗೆಯನ್ನು ಚರ್ಚಿಸಿದರು.

ಅಪರಾಹ್ನದಲ್ಲಿ ಮೌನ ಆತ್ಮಪರೀಕ್ಷಣೆಯ ನಂತರ ಗುರುಗಳ ವಿಡಿಯೋವನ್ನು ಪ್ರದರ್ಶಿಸಲಾಯಿತು. ಅವರಿಂದ ಅದ್ಭುತ ಪ್ರತಿಕ್ರಿಯೆ ದೊರಕಿತು. ಭಾಗಿಗಳು ಇಂತಹ ಸಭೆಗಳನ್ನು ಪುನಃ ನಡೆಸಿಕೊಡುತ್ತಿರಬೇಕೆಂದು ಅಭಿಪ್ರಾಯಪಟ್ಟರು.



# ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣೆ

## ಅಹಮದ್‌ನಗರ್

ಫೆಬ್ರುವರಿ 11ರಂದು ಪ್ರಬಂಧ ನಿರ್ವಹಣಾ ತಂಡವು ಭಾಗವಹಿಸಿದ ಶಾಲೆಗಳಿಗೆ ಹೋಗಿ ಬಹುಮಾನಗಳನ್ನು ಮತ್ತು ಪ್ರಮಾಣಪತ್ರವನ್ನು ವಿತರಿಸಿದರು. ಅವರು ಶ್ರೀ ಶಿವಾಜಿ ಸೈನಿಕ್ ಶಾಲೆ ಮತ್ತು ಶಿವಶಂಕರ್ ವಿದ್ಯಾಮಂದಿರಕ್ಕೆ ಭೇಟಿ ನೀಡಿ ವಿಜೇತರನ್ನು ಗೌರವಿಸಿದರು. ಈ ವರ್ಷ ಅಹಮದ್‌ನಗರ್ ಕೇಂದ್ರವು ವಲಯವುವಟ್ಟದ ಎರಡು ಪ್ರಶಸ್ತಿಗಳನ್ನು ತೆಗೆದುಕೊಂಡಿತು. ಮುಕ್ತಸಭೆಯೊಂದನ್ನು ಸಹಜಮಾರ್ಗದಲ್ಲಿ ಆಸಕ್ತಿಯುಳ್ಳ ಶಿಕ್ಷಕರಿಗಾಗಿ ನಡೆಸಿಕೊಡಲಾಯಿತು.

## ನಾಸಿಕ್

ಫೆಬ್ರುವರಿ 11ರಂದು ಭಾಗಿಗಳು ಮತ್ತು ವಿಜೇತರಿಗಾಗಿ ಕಾರ್ಯಕ್ರಮವೊಂದನ್ನು ಆಯೋಜಿಸಲಾಗಿತ್ತು. ಹತ್ತು ವಿದ್ಯಾರ್ಥಿಗಳು ತಮ್ಮ ಪಾಲಕರೊಂದಿಗೆ ಪಾಲ್ಗೊಂಡರು. ಮೂವತ್ತಕ್ಕೂ ಮಿಗಿಲಾದ ಭಾಗಿಗಳು SRCM ಕುರಿತ ಲಘು ಪರಿಚಯವನ್ನು ಮನವಿಟ್ಟು ಕೇಳಿದರು. ಅವರು ಉತ್ತಮ ಜೀವನದ ಅರಿವನ್ನು ಯುವಪೀಳಿಗೆಯಲ್ಲಿ ಮೂಡಿಸುವ ಮಿಷನ್ನಿನ ಪ್ರಯತ್ನವನ್ನು ಶ್ಲಾಘಿಸಿದರು. ಸೋ.ಟೌಂಕ್‌ರವರು ಬಹುಮಾನ ವಿತರಿಸಿದರು. ವಿಜೇತರಿಗೆ 'ಟೇಲ್ ಮಿ ಮಾಸ್ಟರ್'ನ ಪ್ರತಿ ಮತ್ತು ಲೇಖನಿಗಳನ್ನು ನೀಡಲಾಯಿತು.



## ಬೆಂಗಳೂರು

ಬೆಂಗಳೂರಿನ ಬನಶಂಕರಿ ಆಶ್ರಮದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಂಗಳೂರಿನ ವಿಜೇತ 16ವರ್ಷದ ಯಶಸ್ವಿ ನಾಯಕ್ ಹೇಳಿದನು, "ಮಂಗಳೂರಿನಲ್ಲಿ ನನ್ನ ತಂದೆಯು ಇಲ್ಲದಾಗ ಎಲ್ಲಾ ಪೂಜೆಗಳಲ್ಲಿ ನಾನೇ ಭಾಗವಹಿಸಬೇಕಾಗಿತ್ತು ಹಾಗೂ ನಾನು ಅದನ್ನೇ ಆಧ್ಯಾತ್ಮ ಎಂದು ತಿಳಿದಿದ್ದೆ. ಆದರೆ ಇಲ್ಲಿ ಬಂದು ನಿಮ್ಮನ್ನು ಕಂಡ ನಂತರ ತಿಳಿಯಿತು, ಆಧ್ಯಾತ್ಮವೆಂದರೆ ಮಾನವಕುಲದ ಸೇವೆ ಎಂದು."

11 ವಿಜೇತ ಶೈಕ್ಷಣಿಕ ಸಂಸ್ಥೆಗಳಿಂದ 30 ಅತಿಥಿಗಳು ಹಾಜರಿದ್ದರು. ದಕ್ಷಿಣ ಕರ್ನಾಟಕ ವಲಯದಲ್ಲಿ 330 ಶಿಕ್ಷಾಸಂಸ್ಥೆಗಳಿಂದ 3300 ಸ್ಪರ್ಧಿಗಳು ಭಾಗವಹಿಸಿದ್ದರು.





# ಬಾಬೂಜಿ ಸ್ಮಾರಕ ಆಶ್ರಮದ 8ನೇ ವಾರ್ಷಿಕೋತ್ಸವ

## ಕೊಲ್ಕಾತಾ, ಪ.ಬಂಗಾಳ

## ಡಿಸೆಂಬರ್ 24, 2011

ಶೀತಲ ಮುಂಜಾವಿನಂದು ದುರ್ಗಾಪುರ, ಬೋಂದಲ್, ಫ಼ರಕ್ಕ, ಜಾರ್ಖಂಡ್ ರಾಜ್ಯ ಮತ್ತು ಕೊಲ್ಕಾತಾದಿಂದ ಸುಮಾರು 70 ಅಭ್ಯಾಸಿಗಳು ಆಚರಣೆಗಾಗಿ ಒಟ್ಟುಗೂಡಿದ್ದರು. ಮುಂಜಾನೆಯ ಅವಧಿಯಲ್ಲಿ 'ಧ್ಯಾನ' ಮತ್ತು ಅಪರಾಹ್ನದ ಅವಧಿಯಲ್ಲಿ 'ಶುದ್ಧೀಕರಣ'ವನ್ನು ವಿವರಿಸಲಾಯಿತು. ತಮ್ಮೊಳಗಿನ ದೈವೀ ಪ್ರಕಾಶದೊಂದಿಗೆ ಸಂಪರ್ಕ ಹೊಂದಲು ಐದು ನಿಮಿಷಕಾಲ ಧ್ಯಾನ ಮಾಡುವಂತೆ ಭಾಗಿಗಳಿಗೆ ಕೇಳಲಾಯಿತು. ನಂತರ ಅವರನ್ನು ಆಯೋಜಕರಿಂದ ನಡೆಸಲ್ಪಟ್ಟ ಐದು ಗುಂಪುಗಳನ್ನಾಗಿ ವಿಂಗಡಿಸಿ ಹತ್ತು ನಿಯಮಗಳ ಅರ್ಥವನ್ನು ಆಳವಾಗಿ ಅರಿಯಲು





ಅನುಕೂಲವಾಗುವಂತೆ ಆಯ್ದ ವ್ಯಾಖ್ಯಾನಗಳೊಂದಿಗೆ ಓದಲಾಯಿತು.

ಮಕ್ಕಳ ಕೇಂದ್ರವು ಮಕ್ಕಳನ್ನು ಇಡೀದಿನ ವ್ಯಸ್ತವಾಗಿಡುವಂತೆ ಅನೇಕ ಚಟುವಟಿಕೆಗಳನ್ನು ಆಯೋಜಿಸಿದ್ದರು.

## ಡಿಸೆಂಬರ್ 25 ಮಕ್ಕಳಿಗಾಗಿ ಕ್ರೀಡಾದಿನ

ಭಾನುವಾರದ ಸತ್ಸಂಗದ ನಂತರ ಮಕ್ಕಳ ಕೇಂದ್ರವು ಕ್ರೀಡಾದಿನವನ್ನು ಆಯೋಜಿಸಿತ್ತು. ಮಕ್ಕಳು, ಪಾಲಕರು ಮತ್ತು ಅಜ್ಜ ಅಜ್ಜಿಯರು ಸಂತೋಷದಿಂದ ಪಾಲ್ಗೊಂಡರು. ಮಧ್ಯಾಹ್ನ ಊಟದ ನಂತರ ಬಹುಮಾನ ವಿತರಿಸಿ ಕಾರ್ಯಕ್ರಮವನ್ನು ಸಂಜೆ ಸತ್ಸಂಗದೊಡನೆ ಮುಕ್ತಾಯಗೊಳಿಸಲಾಯಿತು. ಪಾಲ್ಗೊಂಡವರೆಲ್ಲ ಸಂತಸಮಯ ವಾರಾಂತ್ಯದಲ್ಲಿ ತಮ್ಮ ಸಾಧನೆಯ ಕಡೆಗೆ ನವೀನ ಮತ್ತು ಚೈತನ್ಯದಾಯಕ ಬದ್ಧತೆಯನ್ನು ಹೊಂದಿದರು.

## ಚಾರಿತ್ರ್ಯ ನಿರ್ಮಾಣದ ಕುರಿತ ಕಾರ್ಯಕ್ರಮ

**ಬಿಕನೇರ್, ರಾಜಸ್ಥಾನ**



ಅಭ್ಯಾಸಿಗಳು ವರ್ಷದ ಮೊದಲನೇ ದಿನವನ್ನು ಚಾರಿತ್ರ್ಯ ನಿರ್ಮಾಣದ ಮಹತ್ವ ಕುರಿತ ಅರ್ಧ ದಿನದ ಕಾರ್ಯಕ್ರಮದಿಂದ ಪ್ರಾರಂಭಿಸಿದರು. ಭಾಗಿಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿ ಪ್ರತಿ ಗುಂಪಿಗೂ ಚಾರಿತ್ರ್ಯ ನಿರ್ಮಾಣ, ನಡತೆ, ಪ್ರೇಮ, ವಿನಯ, ತ್ಯಾಗ ಮುಂತಾದವುಗಳಲ್ಲಿ ನಾಲ್ಕು ವಿಷಯಗಳನ್ನು ನೀಡಲಾಗಿತ್ತು. ಪ್ರತೀ ಗುಂಪಿನ ಪ್ರತಿನಿಧಿಯು ಚರ್ಚೆಯ ಸಾರಾಂಶ ನೀಡಿದರು. ಎಲ್ಲಾ ಅಂಶಗಳೂ ಗುರುಗಳು ನಾವು ಪ್ರೇಮ,ತ್ಯಾಗ ಮತ್ತು ಸ್ವಮೌಲ್ಯೀಕರಣದೊಡನೆ ಸಮಾಜ ಮತ್ತು ಲೌಕಿಕ ಪ್ರಪಂಚದಲ್ಲಿ ಹೇಗೆ ಬಿಂಬಿತಗೊಳ್ಳಬೇಕೆಂದು ಆಶಿಸುತ್ತಾರೆನ್ನುವುದನ್ನು ವ್ಯಕ್ತಪಡಿಸಿದವು. ಸೋ. ಮಾನ್‌ಸಿಂಗ್ ಇಂಡಾರವರು 'ಸ್ವಮೌಲ್ಯೀಕರಣದಿಂದ ನಕಾರಾತ್ಮಕತೆಯನ್ನು ಹೋಗಲಾಡಿಸುವುದು' ಬಗ್ಗೆ ಮಾತನಾಡಿದರು. ಸೋ. ಅನಿಲ್‌ಕುಮಾರ್‌ರವರು ಸಮರ್ಪಣೆಯ ಪಾವಿತ್ರತೆ, ನಮ್ಮೆಡೆ ಗುರುಗಳ ಪ್ರೇಮ ಮತ್ತು ಅದಕ್ಕೆ ನಮ್ಮ ಪ್ರತಿಕ್ರಿಯೆಯನ್ನು ಕುರಿತ ಸೋ. ಕಮಲೇಶ್ ಪಟೇಲ್‌ರವರ ಪತ್ರವನ್ನು ಓದಿದರು. ಕಾರ್ಯಕ್ರಮವು ವಂದನಾರ್ಪಣೆಯೊಡನೆ ಮುಕ್ತಾಯವಾಯಿತು.

## ಚಿತ್ರ ಮುದ್ರಣದ ಮೇಲೆ ಕಮ್ಮಟ, ಮುಂಬೈ

ಚಿತ್ರಮುದ್ರಣದ ಕುರಿತು ಎರಡು ದಿನಗಳ ಕಮ್ಮಟವನ್ನು ಡಿಸೆಂಬರ್ 31, 2011 ಮತ್ತು ಜನವರಿ 1, 2012ರಂದು ಪನ್ವೇಲ್ ವಲಯಾಶ್ರಮದಲ್ಲಿ ನಡೆಸಲಾಯಿತು. ಇದನ್ನು ಮಿಷನ್ನಿನ ಪುಸ್ತಕಗಳು, ಕಿರುಪುಸ್ತಿಕೆಗಳು, ಯಾದಿ, ಪ್ರಕಟನಾಪತ್ರಗಳು ಮುಂತಾದವುಗಳ ರಚನೆಗೆ ಸಹಾಯಕವಾಗಲು ಸ್ವಯಂಸೇವಕ ಅಭ್ಯಾಸಿಗಳಿಗಾಗಿ ನಡೆಸಲಾಯಿತು. ಇದರಲ್ಲಿ ಪುಣೆ, ಮುಂಬೈ, ಜಲ್‌ಗಾಂವ್ ಮತ್ತು ನಾಸಿಕ್‌ನಿಂದ ಹದಿನೈದು ಅಭ್ಯಾಸಿಗಳು ಪಾಲ್ಗೊಂಡರು.

ಕಾರ್ಯಾಗಾರವು ಚಿತ್ರಣದ ಮೂಲ ತತ್ವಗಳು ಮತ್ತು ನಕ್ಷೆಯನ್ನು ತಯಾರಿಸುವಾಗ ಅವನ್ನು ಉಪಯೋಗಿಸುವ ವಿಧಾನಗಳನ್ನು ಒಳಗೊಂಡಿತ್ತು. ಡಿಜಿಟಲ್ ಕಲೆಗೆ ಸಹಾಯಕವಾಗುವ ಸಾಫ್ಟ್‌ವೇರ್‌ನ್ನು ಭಾಗಿಗಳಿಗೆ ಒದಗಿಸಲಾಯಿತು. ಇವೆಲ್ಲಾ ಸೌಲಭ್ಯಗಳನ್ನುಪಯೋಗಿಸಿ ಪ್ರಕಟನಾಪತ್ರಗನ್ನು ರಚಿಸುವ ಕೆಲಸವನ್ನು ಪ್ರಯೋಗಾಲಯದಲ್ಲಿ ನೀಡಲಾಗಿತ್ತು. ಭಾಗಿಗಳು ಈ ಕಾರ್ಯಾಗಾರದ ಉಪಯುಕ್ತತೆ ಪಡೆದದ್ದರಿಂದ ಮಿಷನ್ನಿನ ರಚನಾ ತಂಡವು ವಿಸ್ತೃತಗೊಂಡಂತಾಯಿತು.

## ಒತ್ತಡ ನಿರ್ವಹಣೆಯ ಬಗ್ಗೆ ಸಭೆ

**ಜೈಪುರ, ರಾಜಸ್ಥಾನ**

ಜೈಪುರದ HDFC ಲೈಫ್‌ನ ಪ್ರಾದೇಶಿಕ ಕಚೇರಿಯಲ್ಲಿ ಜನವರಿ 8, 2012ರಂದು ಸಭೆಯೊಂದನ್ನು ನಡೆಸಲಾಯಿತು. ಮನಸ್ಸಿನ ನಿಯಂತ್ರಣದಿಂದ ಒತ್ತಡ ನಿರ್ವಹಣೆಯ ಬಗ್ಗೆ ಕಲಿಯಲಿಚ್ಛಿಸುವ, ಧ್ಯಾನದ ಒಳಗನ್ನು ಅರಿಯಲು ಮತ್ತು ಸಹಜಮಾರ್ಗವು ಏನನ್ನು ನೀಡಲಿದೆಯೆಂದು ತಿಳಿಯಬಯಸುವ HDFC ಲೈಫ್‌ನ ಶಾಖಾನಿರ್ವಾಹಕರು ಪಾಲ್ಗೊಂಡಿದ್ದರು. ಸಭೆಯನ್ನು ಶ್ರೀ ಸಂದೀಪ್ ನಯ್ಯರ್ ಆಯೋಜಿಸಿದ್ದು ಜೈಪುರದ ಕೇಂದ್ರವ್ಯವಸ್ಥಾಪಕರಾದ ಸೋ. ಮನೋಜ್ ನಗರ್‌ರವರು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಧ್ಯಾನವು ಹೇಗೆ ಸಹಾಯಕಾರಿ ಎಂಬುದರ ಬಗ್ಗೆ ಮಾತನಾಡಿದರು.

ಸಭೆಯು ಪಾರಸ್ಪರಿಕ ಚರ್ಚೆಯಿಂದ ಕೂಡಿದ್ದು ಭಾಗಿಗಳು ತಮ್ಮ ಅನೇಕ ಸಂದೇಹಗಳಿಗೆ ಪರಿಹಾರ ಕಂಡುಕೊಂಡರು. ಸಭೆಯು ಸಕಲರಿಗೂ ದಾರಿದೀವಿಗೆಯಾಯಿತು.

## ನಾಂದೇಡ್ ಆಶ್ರಮಕ್ಕೆ ಸ್ಪೆಕ್ಟ್ರಮ್ ಆಧ್ಯಾತ್ಮಿಕ ಸಂಘದ ಭೇಟಿ



ಜನವರಿ 27, 2012ರಂದು ಸ್ಪೆಕ್ಟ್ರಮ್ ಆಧ್ಯಾತ್ಮಿಕ ಸಂಘದ ಹದಿನೈದು ಮಹಿಳೆಯರು ಸಹಜಮಾರ್ಗದ ಬಗ್ಗೆ ತಿಳಿದುಕೊಳ್ಳಲು ನಾಂದೇಡ್ ಘಾಟ ಆಶ್ರಮಕ್ಕೆ ಭೇಟಿ ನೀಡಿದರು.

ಸೋ. ಶುಭದಾ ಆಪ್ಟೆಯವರು ನಡೆಸಿಕೊಟ್ಟ ಪ್ರಶ್ನೋತ್ತರ ಅವಧಿಯಲ್ಲಿ ಮಹಿಳೆಯರು ಅರ್ಥಬದ್ಧ ಉತ್ತರಗಳನ್ನು ನೀಡಿದರು.

ನಂತರ ಸೋ.ಸುರಭಿ ಮತ್ತು ಸೋ. ಶ್ರೀಮತಿ ವೈದ್ಯರವರು ಸಹಜಮಾರ್ಗದ ಆಳವಾದ ಪರಿಚಯ ಮಾಡಿಕೊಟ್ಟರು. ಅತಿಥಿಗಳು ನಂತರ ಪಾಕಶಾಲೆಯಲ್ಲಿ ಸಿದ್ಧಗೊಳಿಸಲಾದ ರುಚಿಕರ ಭೋಜನವನ್ನು ಆಶ್ರಮದ ಮರಗಳ ನೆರಳಿನಲ್ಲಿ ಆನಂದಿಸಿದರು.



# Centre of Light

## ಗುಲ್ಬರ್ಗಾ ಆಶ್ರಮ

### ಬಾಬೂಜಿಯವರು ಬಿತ್ತಿದ ಬೀಜ

ಗುಲ್ಬರ್ಗಾವು ಉತ್ತರ ಕರ್ನಾಟಕದ ವಿಭಾಗೀಯ ಕೇಂದ್ರ ಹಾಗೂ ಬಹಮನಿ ಸಾಮ್ರಾಜ್ಯದ ಜನ್ಮಸ್ಥಳವಾಗಿದೆ. 1957ರಲ್ಲಿ ಇಲ್ಲಿ ಮಿಷನ್ ಪ್ರಾರಂಭವಾಯಿತು ಹಾಗೂ ದಿ. ಎಸ್.ಎ.ಸರ್ನಾಡಜಿಯವರು ಈ ಕೇಂದ್ರದ ಮೊದಲ ಅಭ್ಯಾಸಿ ಬಳಗದಲ್ಲೊಬ್ಬರು. ಅವರು ನಂತರ ಹಲವು ವರ್ಷಗಳ ಕಾಲ ಮಿಷನ್ನಿನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.

ಬಾಬೂಜಿ ಮಹಾರಾಜರು 1957, 1963 ಮತ್ತು 1968ರಲ್ಲಿ ಗುಲ್ಬರ್ಗಾಕ್ಕೆ ಭೇಟಿ ನೀಡುವ ಮೂಲಕ ಈ ಕೇಂದ್ರವನ್ನು ಪೋಷಿಸಿದರು. ಡಿಸೆಂಬರ್ 15, 1957ರಂದು ಗುಲ್ಬರ್ಗಾದ ವಾರ್ಷಿಕೋತ್ಸವ ಸಮಾರಂಭದಲ್ಲಿ ನೀಡಿದ ಸಂದೇಶದಲ್ಲಿ ಅವರು ಸಹಜಮಾರ್ಗವನ್ನು ಸರಳೀಕರಿಸಿ ಹೇಳಿದ್ದಾರೆ: "...ನನ್ನ ವೈಯಕ್ತಿಕ ಅನುಭವದ ಆಧಾರದ ಮೇಲೆ ನಾನು ಎಲ್ಲರೂ ಅನುಸರಿಸಬಹುದಾದ ಸರಳ ವಿಧಾನವನ್ನು ಸೂಚಿಸುತ್ತೇನೆ. ಓರ್ವನು ತನ್ನ ಹೃದಯವನ್ನು ವಿಕ್ರಯಿಸುವುದಾದರೆ, ಅರ್ಥಾತ್ ಅದನ್ನು ಪೂಜ್ಯ ಗುರುಗಳಿಗೆ ಉಡುಗೊರೆಯನ್ನಾಗಿತ್ತರೆ ಮತ್ತೇನೂ ಮಾಡಲು ಉಳಿಯದು. ಅದು ಅವನನ್ನು ಅನಂತ ಸತ್ಯದಲ್ಲಿ ಲೀನವಾಗುವ ಸ್ಥಿತಿಗೆ ಸಹಜವಾಗಿಯೇ ತರುತ್ತದೆ."





### ಆಶ್ರಮ ಮತ್ತು ಅದರ ಚಟುವಟಿಕೆಗಳು

ಈ ಕೇಂದ್ರವು ಸುಮಾರು 450 ಅಭ್ಯಾಸಿಗಳೊಂದಿಗೆ ಅಭಿವೃದ್ಧಿ ಹೊಂದಿದ್ದು ಭಾನುವಾರದ ಸತ್ಸಂಗದಂದು ಸರಾಸರಿ 170 ಅಭ್ಯಾಸಿಗಳ ಹಾಜರಾತಿಯಿರುತ್ತದೆ. ರೈಲ್ವೆ ನಿಲ್ದಾಣದಿಂದ 5ಕಿ.ಮೀ. ದೂರದಲ್ಲಿ ಸೇಡಮ್ ರಸ್ತೆಯಲ್ಲಿರುವ ಆಶ್ರಮದ ಶಂಕುಸ್ಥಾಪನೆಯನ್ನು ಗುರುಗಳು ಮಾರ್ಚ್23, 1993ರಂದು ಮಾಡಿದರು ಮತ್ತು ಮೇ 13, 1994ರಂದು ಉದ್ಘಾಟಿಸಿದರು. ಈ ಎರಡು ಮಹಡಿ ಕಟ್ಟಡವು 18000ಚ.ಅಡಿ ವಿಸ್ತೀರ್ಣ ಹೊಂದಿದ್ದು 300 ಜನರಿಗೆ ಸ್ಥಳಾವಕಾಶವಿರುವ ಧ್ಯಾನಮಂದಿರ, ವಸತಿಗೃಹ, ಕಛೇರಿ, ಪಾಕಶಾಲೆ, ಶೌಚಾಲಯಗಳು, ಪುಸ್ತಕಾಲಯ ಹಾಗೂ ಪುಸ್ತಕಭಂಡಾರವನ್ನೊಳಗೊಂಡಿದೆ. ಸತ್ಸಂಗವನ್ನು ಭಾನುವಾರ ಹಾಗೂ ಮಂಗಳವಾರ, ಬುಧವಾರ, ಗುರುವಾರ ಸಂಜೆ ನಡೆಸಲಾಗುತ್ತದೆ. ವೈಯಕ್ತಿಕ ಬೈಠಕುಗಳನ್ನು ಶುಕ್ರವಾರ ಹಾಗೂ ಶನಿವಾರಗಳಂದು ನೀಡಲಾಗುತ್ತದೆ. ಮಿಷನ್ನಿನ ವಿವಿಧ ಕಾರ್ಯಕಲಾಪಗಳಿಗಾಗಿ ಸ್ವಯಂಸೇವಾ ತಂಡವು ಸದಾ ಸನ್ನದ್ಧವಾಗಿರುತ್ತದೆ.



### ಶರಣಾಗತಿಯ ರಹಸ್ಯ

ಗುರುಗಳು 1984, 1987, 1989, 1990, 1993, 1994, 1998 ಮತ್ತು 2002ಗಳಲ್ಲಿ ಈ ಕೇಂದ್ರಕ್ಕೆ ಭೇಟಿ ನೀಡುವ ಮೂಲಕ ಆಶ್ರಮದ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ಅವರ ಹಿಂದಿನ ಭೇಟಿಯಲ್ಲಿ ಅವರು ಶರಣಾಗತಿ ಮತ್ತು ಆಧ್ಯಾತ್ಮಿಕ ಪ್ರಗತಿಯ ರಹಸ್ಯವೆಂದರೆ ಗುರುಗಳಿಗಾಗಿ ಕೆಲಸ ಮಾಡುವುದು ಎಂದು ಪ್ರಕಟಿಸಿದರು. "ಶರಣಾಗತಿಯೆಂಬ ಒಂದು ಶಬ್ದದಲ್ಲಿ ಅತ್ಯಗತ್ಯವಾದ ಅನೇಕಾನೇಕ ಮನೋವೃತ್ತಿಗಳು ಅಡಕವಾಗಿವೆ ಹಾಗೂ ನಾನು ಪಾಲಿಸುತ್ತಿರುವ ಸರಳ ವಿಧಾನವೆಂದರೆ ನಾನು ಅವರ ಕೆಲಸ ಮಾಡುತ್ತಲೇ ಹೋಗುತ್ತೇನೆ ಮತ್ತು ಅದು ಕೆಲಸ ಮಾಡುತ್ತಲೇ ಇದೆ."



### ಭವಿಷ್ಯ

ಇತ್ತೀಚೆಗೆ ಕೇಂದ್ರವು ಸೇಡಮ್ ರಸ್ತೆಯಲ್ಲಿ ಇನ್ನೂ ಮುಂದೆ 34 ಎಕರೆ ಜಾಗವನ್ನು ತೆಗೆದುಕೊಂಡಿದೆ, ಅದರಲ್ಲಿ ಆಶ್ರಮಕ್ಕಾಗಿ 12 ಎಕರೆ ಕಾದಿರಿಸಿ ಉಳಿದುದನ್ನು ವಸತಿಪ್ರದೇಶಕ್ಕಾಗಿ ಉಪಯೋಗಿಸಿಕೊಳ್ಳಲಾಗುತ್ತದೆ. ಗುರುಗಳು ಹೊಸ ಆಶ್ರಮವನ್ನು "ಬಾಬೂಜಿ ಮೆಮೋರಿಯಲ್ ಆಶ್ರಮ, ಗುಲ್ಬರ್ಗಾ" ಎಂದು ಮತ್ತು ವಸತಿಪ್ರದೇಶವನ್ನು "ಯೋಗ ಜೀವನ ಎನ್‌ಕ್ಲೇವ್" ಎಂದು ಕರೆದಿದ್ದಾರೆ. ಪ್ರಗತಿಯ ಪರಿಮಾಣವನ್ನು ಗಮನಿಸಿದರೆ ಇದು ಭವಿಷ್ಯದಲ್ಲಿ ಗುಲ್ಬರ್ಗಾದ ಅಗಾಧ ಬೆಳವಣಿಗೆಯ ಸಂಕೇತ.

**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**

© 2011 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.